SRI H. R. KESHAVA MURTHY (Gandasi).—This is another bitter Bill that Government wants to load on the shoulders of the people. We are already overburdened with the heavy taxes levied by the Government in one form or the other. The ruling party people are boasting that the raiyats are the back-bone of the country, but systematically they are breaking the back-bone of the raiyats by all sorts of legislation to snatch away what little is left with them. But I am very near to reality. We can just make out how the back-bone of our ruling class is protected in our Rama Rajya. When the Sales Tax Bill was under discussion in the House, a number of friends of the ruling class swarmed Vidhana Soudha and saw that the Sales Tax Bill was rushed into the Select Committee because that referred to the friends of the ruling class. But in this Bill, which mainly refers to agricultural class, you can find no one. The raiyat is left in the lurch without any defenders. I do not know why our Chief Minister is not liking the landed class. He wants to see somehow or other this Bill is passed so that the poor landed class is put to trouble and that their belongings are snatched away once and for all by levying a tax for five years. Whenever any legislation is passed, it is fair to levy and demand tax after that legislation is passed, but to give retrospective effect by virtue of which to snatch away previous year's taxes, not legitimate taxes, but taxes imposed by the passing of amendments in the Legislature is not fair. What would be the reaction of the masses or the tax-payers to such measures? Many legal experts have discussed at large the legal implications. So, I do not want to enter into those details. But I want to say a few words generally. One of our friends said that amendment of Section 36 was a superfluity. But the Government have said that when there is already a proceeding in a court of law, there is no fear of limitation and in spite of that, the Government have included this amendment to arm themselves against an imaginary fear. With regard to amendment of Section 69, sub-clause (3) is most confusing. Even if we read it a dozen times, we cannot make out the meaning of it clearly. Since this taxation measure refers to landed class they want to confuse them and find a way to snatch away in the shape of taxes all their belongings. I would suggest to them: let them take away everything from these people and build up their own Government and glorify it. I want to bring to the notice of this House how the agriculturists are harassed in the process of collection by the executives of the Government. A lay man does not know how much tax he has to pay and he does not know legislation like the Income Tax Act. Simply, the executive officer issues a notice and he pays Rs. 500 or Rs. 1,000 though his actual income may not be Rs. 1,000 or Rs. 500. The raiyat pays it out of fear of Government by taking a loan from somebody and then foregoing the bare necessities. This is the situation in the rural areas. When he is already harassed, our Government want to reassess him in the shape of such amendments as these. How pathetic the scene is, you can just realise. Now with regard to clause 6, I want to know how many people over 18 years of age you can find in a joint family. They

have specified an age-lmit just to hoodwink and to extract more tax in this way. The intention is not sincere, because if you just see in every family, you can hardly find three or four people with more than 18 years of age and children under 18 years of age will be more in number. That means they are not allowing people to recognise that children below 18 years are human beings. Now, this Government is not recognising people under 18 years as human beings because they are already excluded here. You can just see whether it is right or wrong. Section 6 is nothing but an infringement of the fundamental rights that are bestowed by the Constitution. We are not allowed freedom. If the Government assesses, the raiyat has no freedom to appeal against the atrocities committed by the Government. So, the Government is barring the court to interfere with the recklessness or the atrocities committed by them in the shape of collection, etc. Now, page 4, para 2, stated :

"For the removal of doubts it is hereby declared..." They say that they are 'declaring'. How audacious that word is ? The raiyat has to pay tax and the Government extracts money in the shape of tax from the raiyats. To use such a harsh word how fine it is in a country like Mysore, you can just realise. I do not want to say anything more. This Bill has caused really a hard blow to the raiyat. I would rather say that our Leader of the House should kindly see that this Bill is withdrawn and thus help the raiyat community.

4-P.M.

Mr. DEPUTY SPEAKER.—I think it would be better if a time limit is put because there are many members who desires to speak. I will put a time limit of ten minutes for each member.

Sri C. J. MUCKANNAPPA.—Sir, you can at the pleasure of the House extend the time by one hour.

Sri S. R. KANTHI.—There is no question of pleasure of the House. The Chair has the inherent right to extend time by one hour.

Mr. DEPUTY SPEAKER.—I will now call upon Sri V. S. Patil to speak.

†Sri V. S. PATIL (Belgaum I).—I shall try to finish my speech within ten minutes.

This is one of the most important Bills that has been introduced in this Assembly. When we first came to this State, the first and foremost Bills introduced were for collection of taxes or to increase the income of the State. This amending Bill is one of those Bills and it clearly shows in what hurried manner the Government had got passed the tax measures in the last Assembly. Even now I do not feel that this Bill has been drafted carefully in order to avoid any further complications in the course of law or in the working of the present Acts. Sri J. H. Shamsuddin has supported the accusation in saying that clause 2 should be deleted from this Bill. This amendment proposing clause 2 appears to be rather absurd. If we consider this deeply from the legal aspect, I do not think we are entitled to levy any tax on the people who are not the residents of the State whose extra territorial jurisdiction is not vested in this legislation at all. I submit that we can tax the territory which is included in this State from the date of reorganisation, *i.e.*, 1-11-1956. We cannot go back and tax the territories which are not included. Sri J. H. Shamsuddin said that a hitch has come over regarding the taxes to be collected for the year 1955-56. In 1955-56 several parts of the present State were not parts of this State. They were parts of different States and we have absolutely no right to tax those people who were outside the State. By incorporating the words "the following clause shall be and shall always be deemed to have been substituted...", it would mean that we want to give retrospective effect. Even if we can do so, is this Legislature entitled to tax on a territory which was not subject to jurisdiction at all ? That point will again come up before judicial authorities and I am sure we will get another kick from the High Court or the Supreme Court. So, for the faults of the executive, for the incorrect drafting, we have to bear the blames from the judiciary. This is not the

(SRI V. S. PATIL)

only occasion. There are several occasions when our Acts and sentences have been thrown out by the judiciary. So far as the amendment is concerned, I can assure the Chief Minister that this clause will be thrown out again by the judiciary and we will have to bow down to that authority.

Regarding clause 3, the proposed two provisos contradict one another. A deep reading of this clause will show that there is practically overlapping. I do not know why the Government have tried to get here unrestricted power to collect taxes.

Regarding the amendment of the schedule, I really fail to understand why an age limit of 18 is introduced. A joint family is a joint family and an Aliya Santhana family is an Aliya Santhana family whether it consists of adults or minors. I do not know why this age limit is put. At the present time when the members of a joint family attain majority or attain some understanding and capacity to work, practically they separate themselves and the exemption given to the big families will be taken away by adding the words "who are not less than eighteen years of age". I fail to understand why this discrimination has been made. I may point out that by this we are discriminating the minors against the majors. When we make law it should be uniform and we should not make such discriminations. I feel this also may in future be thrown out as discriminatory.

About the validation clause, I may say that this is going on in every session. Our officers commit wrongs and the aggrieved party goes to the judiciary. The judiciary quashes the orders and then our officers, to get sanctity for the illegality, put up such validation clauses. Is this the way in which we are to guard the interests of the State? The judiciary is an independent body but we are being deprived of our independence due to the ministerial chairs that have been given to our people. Our people when they occupy the chairs of Ministers, they become the whole and sole executive. They forget the fact that they come from the legislature and that the dignity of the legislature is much more valuable than the executive. They identify themselves with the executive, protecting them by legalising the illegal acts. This is not the way we expect our friends on the opposite side to work so far as the Legislature is concerned. I submit that this validating business should not occur in any Act or in any Bill at all. If the officers have committed any breach of law, if they have exceeded their authority, they must be punished. It is not our business to protect them whenever they commit any illegality. I submit that this validation business should never come on the floor of this House at all.

Sri C. J. MUCKANNAPPA.—That is the order of this Congress mis-rule.

Sri V. S. PATIL.—Then, I should like to request the Hon'ble Chief Minister that whenever these Bills are placed before us, we must have a clear statement of objects and reasons to understand. In this Bill, there are only two reasons given why this Bill is introduced—due to some official difficulty. That is not the way in which members are expected to understand. Government have to come out with all the reasons why it is so. Similarly, I should like to request the Hon'ble Chief Minister either to withdraw this Bill or refer it, if he feels that something must be done for the Executive, to a Select Committee.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಅಧ್ಯಕ್ಷ ಮಹಾಶಯರೇ, ಈ ಒಂದು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಮಸೂದೆಯ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಮೂರು ತಿದ್ದುಪಡಿಗಳನ್ನು ಸೂಚನೆ ಮಾಡಿದ್ದಾರೆ. ಅದರಲ್ಲಿ ಬಹಳ ಗುರುತರವಾಗಿ ಆಲೋಚನೆ ಮಾಡಬೇಕಾದದ್ದು ಏನು ಎಂದರೆ ಷೆಡ್ಯೂಲಿಗೆ ತಂದಿರತಕ್ಕ ತಿದ್ದುಪಡಿ, ಆದರೂ ಈ ಎಲ್ಲಾ ತಿದ್ದುಪಡಿಗಳು ಬಹಳ ಮುಖ್ಯವಾದುವು ಎಂದು ನನಗೆನ್ನಿಸುತ್ತದೆ. ಅದಕ್ಕೆ ಕಾರಣ ಇಷ್ಟೆ. ಹಿಂದೆ ಇದ್ದ ಕಾನೂನಿನಲ್ಲಿ ಒಂದು ಶಂಕೆ ಇದ್ದು ಅದನ್ನು ಪರಿಹಾರ ಮಾಡಬೇಕು ಎನ್ನುವ ದೃಷ್ಟಿಯಿಂದ ಒಂದು ಹಿಂದೂ ಅವಿಭಕ್ತ ಕುಟುಂಬಕ್ಕೆ ಮಿತಿ ಯಾವ ರೀತಿ ಇರಬೇಕು ಎನ್ನುವುದಕ್ಕೆ ಈ ಮಸೂದೆಯಲ್ಲಿ ಸೂಚನೆಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರ 18 ವರ್ಷಗಳನ್ನು ಮುಗಿಸಿರತಕ್ಕ ಐದು ಜನ ಸದಸ್ಯರು ಇರತಕ್ಕ ಒಂದು ಕುಟುಂಬಕ್ಕೆ ಹಿಂದೂ ಜಾಯಿಂಟ್ ಫ್ಯಾಮಿಲಿ ಎಂದು ಕರೆಯಬೇಕೆಂದು ಹೇಳಿದ್ದಾರೆ. ಒಂದು ಸಂಸಾರದಲ್ಲಿ ಎಷ್ಟು ಜನ ಇದ್ದಾರೆ, ಆದಾಯ ಏನು ಇದೆ, ಖರ್ಚು

ಎಷ್ಟು ಇದೆ ಎಂಬುದನ್ನು ಪರಿಗಣನೆಗೆ ತೆಗೆದುಕೊಂಡು ಈ ಒಂದು ವ್ಯವಸಾಯ ತೆರಿಗೆಯನ್ನು ವಿಧಿಸತಕ್ಕದ್ದು ಸಾಧುವಾದದ್ದು ಎನ್ನುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಈ ಮಸೂದೆಯಲ್ಲಿ ತಂದಿರತಕ್ಕ ತಿದ್ದುಪಡಿಯ ಪ್ರಕಾರ 18 ವರ್ಷಕ್ಕೆ ಮೇಲ್ಪಟ್ಟ ಐದು ಜನಗಳು ಒಂದು ಕುಟುಂಬದಲ್ಲಿ ಇದ್ದರೆ, ಏಳು ಸಾವಿರ ರೂಪಾಯಿಗಳ ಪರಿಮಿತಿ ಇರಬೇಕೆಂದು ಇದೆ. ಹಳ್ಳಿಯಲ್ಲಿರತಕ್ಕ ಜನ ಬರೀ ವ್ಯವಸಾಯವನ್ನೇ ಅವಲಂಬಿಸಿರತಕ್ಕ ಜನ. ವ್ಯವಸಾಯದ ಜೊತೆಗೆ ಸೈಡ್‍ಬಿಸಿನೆಸ್ ವ್ಯಾಪಾರ ಇತ್ಯಾದಿಗಳನ್ನು ಇಟ್ಟುಕೊಂಡಿಲ್ಲ. ಬರೀ ವ್ಯವಸಾಯದಿಂದಲೇ ಜೀವನ ಮಾಡತಕ್ಕ ಜನಗಳ 17 ವರ್ಷ, 14 ವರ್ಷ, 12 ವರ್ಷ ಇರತಕ್ಕ ಮಕ್ಕಳು ವಿದ್ಯಾಭ್ಯಾಸ ಮಾಡಬೇಕಾದರೆ ಮತ್ತು ಅವರನ್ನು ಕಾಲೇಜು ವ್ಯಾಸಂಗಕ್ಕೆ ಪಟ್ಟಣಗಳಿಗೆ ಕಳುಹಿಸಬೇಕಾದರೆ ಒಂದು ಕುಟುಂಬಕ್ಕೆ ಎಷ್ಟು ಖರ್ಚು ಹಿಡಿದೀತು ಮತ್ತು ಅದರ ವರಮಾನ ಎಷ್ಟು ಎಂಬುದನ್ನು ಯೋಚನೆ ಮಾಡುವುದು ಸಾಧುವಾಗಿದೆ ಎಂದು ನನಗನಿಸುತ್ತದೆ. 18 ವರ್ಷಗಳಿಗೆ ಮೇಲ್ಪಟ್ಟವರು ಐದು ಜನ ಇದ್ದರೆ ಮಾತ್ರ ಒಟ್ಟು ಕುಟುಂಬ ಎಂದು ಪರಿಗಣಿಸುತ್ತೇವೆ ಎಂದು ಈ ಮಸೂದೆಯಲ್ಲಿದೆ. 18 ವರ್ಷಕ್ಕೆ ಮೇಲ್ಪಟ್ಟವರು ನಾಲ್ಕು ಜನ ಇದ್ದರೆ ಅದು ಒಟ್ಟು ಕುಟುಂಬವಾಗುವುದಿಲ್ಲ ಎಂದು ಹೇಳಿದರೆ ಹಳ್ಳಿಗಾಡಿನಲ್ಲಿ ಬರೀ ವ್ಯವಸಾಯವನ್ನೇ ಅವಲಂಬಿಸಿ ಜೀವನ ಮಾಡತಕ್ಕ ಜನಗಳಿಗೆ ಧಕ್ಕೆ ಬರಬಹುದು. ಈ ಒಂದು ಶಂಕೆ ಈ ಮಸೂದೆಯಲ್ಲಿ ನನಗೆ ಕಾಣುತ್ತದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ತೀವ್ರವಾಗಿ ಆಲೋಚನೆ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಈ ಮಸೂದೆಯಲ್ಲಿ ಈಗ ತಂದಿರತಕ್ಕ ತಿದ್ದುಪಡಿಯ ಪ್ರಕಾರ ನಿರ್ದಿಷ್ಟವಾಗಿ 18 ವರ್ಷಕ್ಕೆ ಮೇಲ್ಪಟ್ಟವರು ಒಂದು ಸಂಸಾರದಲ್ಲಿ ಐದು ಜನ ಇರಬೇಕು ಎಂದು ಕಟ್ಟುನಿಟ್ಟಾಗಿ ಹೇಳುತ್ತಿದ್ದಾರೆ. ಐದು ಜನ ಇರುವ ಒಂದು ಕುಟುಂಬಕ್ಕೆ ಏಳು ಸಾವಿರ ರೂಪಾಯಿಗಳ ಪರಿಮಿತಿ ಇರಬೇಕು ಎಂದು ಒರಿಜಿನಲ್ ಆಕ್ಟಿನಲ್ಲಿದೆ. ಒರಿಜಿನಲ್ ಆಕ್ಟಿನಲ್ಲಿ ಮೂಲ ಉದ್ದೇಶ ಏನಿದೆ ಅದನ್ನು ಈ ಒಂದು ತಿದ್ದುಪಡಿಯನ್ನು ಸೂಚನೆ ಮಾಡುವಾಗ ವ್ಯತ್ಯಾಸ ಮಾಡುತ್ತಿದ್ದಾರೆ ಎಂದು ನನಗನ್ನಿಸುತ್ತದೆ. ತಿದ್ದುಪಡಿಯನ್ನು ಸೂಚನೆ ಮಾಡುವಾಗ ಮೂಲಶಾಸನಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಅದನ್ನು ಮಾಡಬೇಕು. ಅದನ್ನು ರೂಪಾಂತರ ಮಾಡತಕ್ಕದ್ದು, ತಿದ್ದುಪಡಿ ಮಾಡತಕ್ಕದ್ದು ಸಾಧುವಲ್ಲ ಎಂದು ನಾನು ಸೂಚನೆ ಮಾಡುತ್ತೇನೆ. ಈ ಸಂದರ್ಭದಲ್ಲಿ ಈ ತಿದ್ದುಪಡಿಗಳನ್ನು ಸೂಚನೆ ಮಾಡತಕ್ಕ ಅವಶ್ಯಕತೆ ಇಲ್ಲ. ಈ ಒಂದು ದೃಷ್ಟಿಯಿಂದ ಈ ಮಸೂದೆಯಲ್ಲಿ ತಂದಿರತಕ್ಕ ತಿದ್ದುಪಡಿಗಳನ್ನು ವಾಪಸ್ಸು ತೆಗೆದುಕೊಳ್ಳಲು ಸರ್ಕಾರದವರು ಯೋಚನೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ನಾನು ಈ ಅಗ್ರಿಕಲ್‍ಚರಲ್ ಇನ್‌ಕಂಟ್ಯಾಕ್ಸ್ ಮಸೂದೆಯ ಮೇಲೆ ಮಾತನಾಡುತ್ತಾ ಹಿಂದೆ ಹೇಳಿದ್ದನ್ನೇ ಮತ್ತೆ ಹೇಳಬೇಕಾಗಿ ಬಂದಿದೆ. ಇದು ವಿಚಿತ್ರ ಸ್ವರೂಪವಾಗಿದೆ. ಮೈಸೂರು ಕಾಂಗ್ರೆಸ್ ಸರ್ಕಾರಕ್ಕೆ ಒಂದು ದೊಡ್ಡ ರೋಗ ಬಂದಿದೆಯೇನೋ ಎಂದು ನನಗನ್ನಿಸುತ್ತದೆ. ನಮ್ಮ ಮೈಸೂರು ದೇಶದಲ್ಲಿರತಕ್ಕ ಉನ್ನತ ನ್ಯಾಯಾಲಯಗಳು ಒಂದು ಕಾನೂನಿನ ವಿಷಯದಲ್ಲಿ ಕೊಟ್ಟಂಥಾ ಒಂದು ಜಡ್ಜ್‌ಮೆಂಟ್ ಸರಿಯಿಲ್ಲ ಎಂದು ಹೇಳಿ ಅದನ್ನು ಹಿತ್ತಲ ಕಡೆಯ ಬಾಗಿಲನಿಂದ ತೆಗೆದುಕೊಂಡು ಬಂದು ತಮ್ಮ ಪಕ್ಷದ ಜನ ಹೆಚ್ಚಿಗೆ ಇದ್ದಾರೆಂದು ಅದಕ್ಕೆ ಈ ಸಭೆಯ ಒಪ್ಪಿಗೆಯನ್ನು ಪಡೆಯುತ್ತಿದ್ದೀರಿ ಎನ್ನುವುದಕ್ಕೆ ಈಗ ಈ ಮಸೂದೆಯನ್ನು ಈ ಸಭೆಯ ಮುಂದೆ ತಂದಿರುವುದು ಮೂರನೇ ಉದಾಹರಣೆ. ಹಿಂದೆ ಮದ್ರಾಸ್ ಕಮರ್ಷಿಯಲ್ ಕ್ರಾಪ್ ಆಕ್ಟ್ ಈ ಸಭೆಯ ಮುಂದೆ ಬಂದಾಗ ಒಂದು ದೊಡ್ಡ ಗಲಾಟೆ ನಡೆದು, ತಿಕ್ಕಾಟವಾಗಿ ಆ ಕಾನೂನು ಸರಿಯಿಲ್ಲ ಎಂದು ಹೇಳಿ ಅದನ್ನು ವಾಪಸ್ಸು ತೆಗೆದುಕೊಂಡರು. ಈಗಾಗಲೇ ಇದರಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಲಾಗಿದೆ ಎಂದು ಹೇಳಿ ಈ ಮಸೂದೆಯನ್ನು ಈ ಸಭೆಯ ಮುಂದೆ ತಂದಿದ್ದೀರಿ. ನಿನ್ನೆಯ ದಿವಸ ಸೇಲ್ಸ್‌ಟ್ಯಾಕ್ಸ್ ಮಸೂದೆಯನ್ನು ಈ ಸಭೆಯ ಮುಂದೆ ತೆಗೆದುಕೊಂಡು ಬಂದು ವರ್ತಕರ ಮೇಲೆ ಕೈ ಇಟ್ಟಿದ್ದೀರಿ. ಇವೊತ್ತು ಭೂಮಿಯನ್ನು ಉಳುವವನೇ ರೈತ. ಬೆಳೆಯುವವನೇ ದೇಶದ ಬೆನ್ನುಮೂಳೆ ಎಂದು ಹೇಳುತ್ತಾ ರೈತನ ಮೇಲೆ ಕೈ ಇಟ್ಟಿದ್ದೀರಿ. ನೀವೇನು ಭಸ್ಮಾಸುರನ ವಂಶಸ್ಥರೇ ಎಂದು ನಾನು ಆಳುವ ಪಕ್ಷದವರನ್ನು ಕೇಳುತ್ತೇನೆ. ದೇವರು ನಿಮಗೆ ಸದ್ಬುದ್ಧಿಯನ್ನು ಕೊಡಲಿಲ್ಲವೇ ? ನೀವು ರೈತನ ಮೇಲೆ ಕೈಹಾಕಬೇಡಿ. ಸರ್ಕಾರದಲ್ಲಿ ಹಣ ಇಲ್ಲದೆ ಹೋದರೆ ರೈತನ ಮೇಲೆ ನಿಮಗೇಕೆ ಹೊಟ್ಟೆಕಿಚ್ಚು ಬಂದಿದೆ ! ಒಂದು ಸಾವಿರ, ಒಂದು ಸಾವಿರದ ಐದುನೂರು ಎರಡು ಸಾವಿರ ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳತಕ್ಕ ಅಧಿಕಾರಿಗಳಿಗೆ ಒಂದು ರೂಪಾಯಿಗೆ ಮೂರು ಆಣೆ ಇನ್‌ಕಂಟ್ಯಾಕ್ಸನ್ನು ಕೊಡಬೇಕೆಂದು ಹೇಳಿದರೆ ಅವರು ನಿಮ್ಮ ಕಣ್ಣಿಗೆ ಮಣ್ಣು ಎರಚಿ ತಮ್ಮ ಕಷ್ಟಸುಖಗಳನ್ನೆಲ್ಲಾ ನಿಮ್ಮ ಮುಂದೆ ಹೇಳಿಕೊಂಡು ಅದನ್ನು ವಜಾ ಮಾಡಿಸಿಕೊಳ್ಳುತ್ತಾರೆ. ರೈತ ಯಾರ ಮುಂದೆ ಬಂದು ತನ್ನ ಕಷ್ಟಸುಖಗಳನ್ನು ಹೇಳಿಕೊಳ್ಳುತ್ತಾನೆ ? ನಿಮಗೆ ವೋಟು ಕೊಟ್ಟು ನೀವು ನಮ್ಮ ಪ್ರತಿನಿಧಿಗಳಾಗಿ ಹೋಗಿ ನಮಗೆ ಉಪಕಾರ ಮಾಡಿ ಎಂದು ಹೇಳಿದವರು ಯಾರು ? ಅಧಿಕಾರಿಗಳು ನಿಮಗೆ ವೋಟು ಕೊಟ್ಟು ನಿಮ್ಮನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಅಧಿಕಾರಿಗಳಿಗೆ ಮಾತ್ರ ಒಂದು ಸಾವಿರ, ಒಂದು ಸಾವಿರದ ಮುನ್ನೂರು ಐವತ್ತು, ಒಂದು ಸಾವಿರದ ಐನೂರು, ಒಂದು ಸಾವಿರದ ಎಂಟು ನೂರು ಹೀಗೆ ಲೆಕ್ಕಾಚಾರವನ್ನು ಹಾಕಿಕೊಂಡು ಅವರಿಗೆ ಸಂಬಳವನ್ನು ಜಾಸ್ತಿ ಮಾಡುತ್ತಿದ್ದೀರಿ. ರೈತ ಕಂದಾಯವನ್ನು ಕಡಮೆ ಮಾಡಿ ಎಂದು ಕೇಳಿದರೆ ಸಾಧ್ಯವಿಲ್ಲ ಎಂದು ಹೇಳುತ್ತೀರಿ. ತಮ್ಮ ಲಿವಿಂಗ್ ಸ್ಟ್ಯಾಂಡರ್ಡ್ ಜಾಸ್ತಿ ಮಾಡಬೇಕು, ತಮಗೆ ಕುಡಿಯುವುದಕ್ಕೆ ನೀರು ಇಲ್ಲ, ಎಲೆಕ್ಟ್ರಿಸಿಟಿಯಿಲ್ಲ, ಸೌದೆ ಇಲ್ಲ, ಅದು ಇಲ್ಲ ಇದು ಇಲ್ಲ ಎಂದು ಹೇಳಿದರೆ ಅವರಿಗೆ ಸಂಬಳಗಳನ್ನು ಜಾಸ್ತಿ ಮಾಡುತ್ತೀರಿ. ಹಿಂದೂಸ್ಥಾನದಲ್ಲಿ ರೈತನೇ ದೇಶದ ಬೆನ್ನುಮೂಳೆ ಎಂದು ಹೇಳುತ್ತೀರಿ. ರೈತನೇ ಭೂಮಿಯ ಒಡೆಯ ಎಂದು ಹೇಳುತ್ತೀರಿ. ಆದರೆ ರೈತನ ವಿಷಯದಲ್ಲಿ ಕನಿಕರವಿಲ್ಲ. ಈ ನಾಡು ಯಾವ ನಾಡೋ ನನಗಂತೂ ಗೊತ್ತಾಗುವುದಿಲ್ಲ.

ನಿಮಗೆ ಹೃದಯವಿಲ್ಲವೇ ಎಂದು ಕೇಳುತ್ತೇನೆ. ಇದು ರೈತನ ರಾಜ್ಯ, ರೈತನ ಉದ್ಧಾರವಾಗಬೇಕು, ರೈತನ ಕಲ್ಯಾಣವಾಗಬೇಕು ಎಂದು ಹೇಳುವ ಜನ, ರೈತನಾದವನು Agricultural Income Tax ಕೊಡಲಿಲ್ಲವೆಂದು ಅವನ ತಲೆ ಮೇಲೆ ಕೈಯಿಟ್ಟು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಭಸ್ಮಾಸುರನ ಪಾತ್ರ ವಹಿಸುತ್ತೀರಿ. ಕಾನೂನು ಕಾಯಿದೆಗಳನ್ನು ತಿಳಿದುಕೊಂಡು B.A., B.L. ಎಂದು ಬೋರ್ಡ್ ಹಾಕಿಕೊಂಡಿದ್ದೀರಿ. ಇದರಲ್ಲಿರುವುದನ್ನು ಸ್ವಲ್ಪ ಓದಬಾರದೇ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು...' ಎಂದು ಶ್ರೀಮಾನ್ ದೊಡ್ಡ ಮೇಟಿಯವರು ಹೇಳಿದರು. ಹೊಲ ಗೇಯಬೇಡವೇ, ಬಿತ್ತ ಬೆಳೆಯಬೇಡವೇ ? ಎಲ್ಲರೂ ಬಂದು ಈ ಪೇಟೆಯಲ್ಲಿ ಪುಟ್ಟಣ್ಣಶೆಟ್ಟರ ಟೌನ್‌ಹಾಲ್ ಮುಂದೆ, ತೋಟದಪ್ಪನವರ ಛತ್ರದ ಮುಂದೆ ಮಲಗಿಕೊಳ್ಳಿ ಎಂದು ಹೇಳುತ್ತೀರಾ ? ಶ್ರೀಮಾನ್ ಪಾಟೀಲರು ತಮಗೆ ಬಹಳ ಸೂಕ್ಷ್ಮವಾಗಿ ತಮ್ಮ ಮನಸ್ಸಿನಲ್ಲಿದ್ದಂಥ ಮಲಗಿಕೊಡಿಂದ್ದಂಥ, ವಿವೇಚನೆಯ ಶಕ್ತಿಯನ್ನು ಸ್ವಲ್ಪ ಹೊಡೆದೆಬ್ಬಿಸಿದ್ದಾರೆ. ಅವರು ಹೇಳಿದುದನ್ನೆಲ್ಲ ಇಲ್ಲಿ ಹೇಳಿ ಶಹಭಾಸ್‌ಗಿರಿ ಪಡೆಯುತ್ತಿದ್ದೀರಿ. ನೀವು ಈ ಮಸೂದೆಯನ್ನು ಓದಿದ್ದೀರಾ ?

"This is a simple measure" ಎಂದು ಹೇಳುತ್ತೀರಿ. Statement of Objects and Reasons ನೋಡಿದ್ದೀರಾ ಎಂದು ಸ್ವಲ್ಪ ಹೇಳಿ. ಶ್ರೀಮಾನ್ ಟಿ. ಮರಿಯಪ್ಪನವರು ಮಂತ್ರಿಗಳಾಗಿದ್ದಾಗಲೂ ಸುಳ್ಳು ಹೇಳುತ್ತಿದ್ದರೋ, ನಿಜ ಹೇಳುತ್ತಿದ್ದರೋ ಎಲ್ಲರೂ ತಲೆ ತೂಗುವಂತೆ ಮಾಡುತ್ತಿದ್ದರು.

Mr. DEPUTY SPEAKER.—I request the Hon'ble Member that he should not use strong words against members who are absent and should not say that they were telling lies.

Sri C. J. MUCKANNAPPA.—He was a Minister here. All his acts and deeds are on record. He was nobody else than the Finance Minister of Mysore State. It is not the individual Sri T. Mariappa that I am referring to, but the Finance Minister of Mysore State.

ಸ್ವಾಮಿ, ಅದಕ್ಕೋಸ್ಕರವಾಗಿ ನಾನು ಈ ಸರ್ಕಾರಕ್ಕೆ ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ದೇಶದಲ್ಲಿ, ಯಾವ ದೇಶದಲ್ಲಿ ರೈತರು ಜಾಸ್ತಿ ಇದ್ದಾರೆಯೋ ಅವರಿಗೋಸ್ಕರವಾಗಿ ಮಾಡುವ ಕಾನೂನಿನಿಂದ ಅವರಿಗೆ ಅನ್ಯಾಯವಾಗಬಾರದು.

Statement of Objects and Reasons ನಲ್ಲಿ ಹೀಗೆ ಹೇಳಿದ್ದಾರೆ :

> " In the light of certain decisions of the Mysore High Court, it is considered necessary to amend the sections 2 (1) (v), 38 and 69 of the Mysore Agricultural Income-Tax Act, 1957. It is also necessary to clarify the provision relating to Hindu undivided families and Aliyasantana and Marumakathayam families referred to in the first proviso to Part I of the Schedule. Hence this Bill."

ಹೈಕೋರ್ಟ್ ತೀರ್ಮಾನದ ಪ್ರಕಾರ ಹಣವನ್ನು ರೀಫಂಡ್ ಮಾಡಿದರೆ ಒಂದೂವರೆ ಕೋಟಿ ರೂಪಾಯಿ ದೇಶದ ಬೊಕ್ಕಸಕ್ಕೆ ನಷ್ಟವಾಗುತ್ತದೆ ಎಂದು ನಿ... ಹೇಳಿದರು, ಹಣವನ್ನು ರೀಫಂಡ್ ಮಾಡುವುದಕ್ಕಾಗಿ... ವುದಿಲ್ಲ, ಅದಕ್ಕೋಸ್ಕರವಾಗಿ ಈ ತಿದ್ದುಪಡಿ ಮಸೂದೆಯನ್ನು ತಂದಿದೆ ಎಂದು ಹೇಳಿದರು. ಈಗ ಈ ಮಸೂದೆಯನ್ನು ತರಬೇಕಾದರೆ ಎಷ್ಟು ಕೋಟಿ ರೂಪಾಯಿ ಸರ್ಕಾರಕ್ಕೆ ನಷ್ಟವಾಗುತ್ತದೆ ? ಯಾರಿ... ಹಣವನ್ನು ರೀಫಂಡ್ ಮಾಡಬೇಕಾಗುತ್ತದೆ ? ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಾಗಲಿ, ಯಾವುದೇ ಸಂದರ್ಭದಲ್ಲಿಯಾಗಲಿ ಹೇಳುವುದಕ್ಕೆ ಹಿಂಜರಿದಿದ್ದಾರೆ. ಎಷ್ಟು ಹಣವನ್ನು ಕೊಡಬೇಕ... ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳ... ಈಗಲಾದರೂ ತಿಳಿಸುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಏನೂ ಇಲ್ಲ, ಕೊ... ಬೇಕಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನು ಹೇಳ... ಹಾವಿನ ಬುಟ್ಟಿಯಲ್ಲಿ ಬಟ್ಟೆಹಾವನ್ನು ಇಟ್ಟು, ಅದರಲ್ಲಿ ಹಾವಿದೆ, ಮುಟ್ಟಬೇಡಿ ಎಂದು ಹೇಳುತ್ತಾರೆ. ಇವರು ಪಾಪ ಗಂಟೆಗಳನ್ನೂ, ದಿನಗಳನ್ನೂ ಎಣಿಸುತ್ತಿದ್ದಾರೆ. ನನಗೇಕೆ ಈ ಜವಾಬ್ದಾರಿ, ಸುಲಭವಾಗಿ ಕೈತಪ್ಪಿಸಿಕೊಂಡು ಹೋಗೋಣ ವ್ಯಾಜ್ಯವೇಕೆ ಎಂದು ನೋಡುತ್ತಿದ್ದಾರೆ.

ನನ್ನ ಸ್ನೇಹಿತರಾದ ಶ್ರೀಮಾನ್ ಬಸವಯ್ಯ ನವರು, ಅವರು ನಿಜವಾಗಿಯೂ ಆಡಳಿತ ಪಕ್ಷದವರು, ಈ ಬಿಲ್ಲನ್ನು ವಾಪಸು ತೆಗೆದು ಕೊಳ್ಳಿ ಎಂದು ಸರ್ಕಾರಕ್ಕೆ ಮನವಿಮಾಡಿಕೊಂಡರು. ಶ್ರೀಮಾನ್ ಷಂಸುದ್ದೀನ್ ಅವರು ಎರಡನೆಯ ತಿದ್ದುಪಡಿ ಸರಿಯಿಲ್ಲವೆಂದು ಹೇಳಿದರು. ಈಗ ತಂದಿರುವ ತಿದ್ದುಪಡಿ ಸರಿಯೇ, ತಪ್ಪೇ ಎಂದು ತಮ್ಮ ಪಕ್ಷದವರನ್ನಾದರೂ ಕೇಳಿದ್ದಾರೆಯೇ ? ಇದನ್ನೆಲ್ಲ ಸರಿಯಾಗಿ ಆಲೋಚನೆ ಮಾಡಿ ನೋಡಿ ಎಂದು ಕೇಳುತ್ತೇನೆ.

Clarification is different from amendment. ಯಾವುದಾದರೂ ಲೋಪದೋಷವಾಗಿದ್ದರೆ ಒಂದು ತಿದ್ದುಪಡಿಯನ್ನು ತಂದು ಅದನ್ನು ಸರಿಪಡಿಸ ಲಾಗುತ್ತದೆ. ಯಾವುದಾದರೂ ಒಂದು ಪದಕ್ಕೆ interpretation ಮಾಡುವಾಗ ಅರ್ಥವ್ಯತ್ಯಾಸವಾಗುವಂತಿದ್ದರೆ, ಅದನ್ನು clarify ಮಾಡಬೇಕು. ಇಲ್ಲಿ clarify ಎಂದರೆ ಏನು, Amendment ಎಂದರೆ ಏನು ಎಂಬುದನ್ನು ಓದಿದ್ದೀರಾ ? " It is also necessary to clarify the provision relating to undivided families......" ಎಂದು Statement of Objects and Reasons ನಲ್ಲಿ ಹೇಳಿದ್ದಾರೆ. ಇದು clarification ಅಲ್ಲ. It is altogther a new provision. It goes against the very spirit of the original Act.

Part I of the Scheduleನ ಇದರಲ್ಲಿ ಪ್ರಾವಿಸೋ ಏನಿದೆ ಎಂದರೆ.—

> "The limit referred to in the above proviso shall be seven thousand rupees in the case of every Hindu undivided family or an Aliyasanthana family or Branch or a Marumkkathayam tarwad or tavazhi including a Nambudiri

family or any other class governed by the law applicable to Nambudiris, which satisfies as at the end of the previous year the condition that it consists of at least five members."

ಐದು ಜನಗಳು ಎಂದರೆ ಹೆಂಗಸರಿರಬೇಕೇ, ಗಂಡಸರಿರಬೇಕೇ ? ಅವರಿಗೆ 18 ವರ್ಷ ಮೀರಿರಬೇಕೇ ಮದುವೆಯಾಗಿರಬೇಕೇ, ಕಂಕುಳಲ್ಲಿ ಮಗುವನ್ನು ಎತ್ತಿಕೊಂಡಿರಬೇಕೇ ಎಂದು ಏನೂ ಹೇಳಿಲ್ಲ. ಆದರೆ ಈಗ ಬಂದಿರುವ ತಿದ್ದುಪಡಿಯಲ್ಲಿ 18 ವರ್ಷಕ್ಕೆ ಮೇಲ್ಪಟ್ಟು ವಯಸ್ಸಾಗಿರಬೇಕು ಎಂದು ಹೇಳಿದ್ದಾರೆ. ಅದು ಹೀಗಿದೆ :

"5. Amendment of the Schedule.—In the first proviso to Part I of the Schedule to the principal Act, after the words 'at least five members' the words 'who are not less than eighteen years of age' shall be and shall always be deemed to have been inserted."

ಮೊದಲು ಮಾಡಿದಂಥ ಕಾನೂನಿಗೆ, ಇದೇ ಸಭೆಯಲ್ಲಿ ಒಪ್ಪಿಕೊಂಡ ಕಾನೂನಿಗೆ ವ್ಯತಿರಿಕ್ತವಾಗಿ ಈ ಪದಗಳನ್ನು ಸೇರಿಸಿರುವುದು ನ್ಯಾಯವೇ ಎಂದು ಕೇಳುತ್ತೇನೆ. ಅದಕ್ಕೋಸ್ಕರವಾಗಿ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಮತ್ತೊಮ್ಮೆ ಸ್ವಲ್ಪ ಯೋಚನೆ ಮಾಡಬೇಕು. ಈ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಬೇಕು, ರೈತರಿಗೆ ತೊಂದರೆ ಮಾಡಬಾರದು ಎಂದು ಹೇಳುತ್ತೇನೆ.

ಹಾಗೆಯೇ amendment of section 69 clause (3) ರಲ್ಲಿ (i) ಮತ್ತು (ii)ನೆಯ ಸಬ್‌ಕ್ಲಾಜ್‌ಗಳನ್ನು ಓದಿನೋಡಿದರೆ ಎಷ್ಟುಮಟ್ಟಿಗೆ ಬುದ್ಧಿವಂತಿಕೆ, ಏನು ಚಾಕಚಕ್ಯತೆ ಇದರಲ್ಲಿ ತುಂಬಿತುಳುಕಾಡುತ್ತಿದೆ ಎನ್ನುವುದು ಗೊತ್ತಾಗುತ್ತದೆ.

"(i) in consequence of, or to give effect to any finding, direction or order made under any provision of the relevant repealed enactment or any judgment, or order made by the Supreme Court, High Court or any other court, whether before or after the commencement of this Act"

ನಿಜ ಸ್ವಾಮಿ, ಯಾವುದಾದರೂ ಒಂದು ವಿಷಯ ಕೋರ್ಟ್ ಮುಂದೆ ಇದ್ದರೆ, ಅವರ ವರಮಾನವನ್ನು assess ಮಾಡಲು ಸಾಧ್ಯವಿಲ್ಲದೆ ಹೋಗುತ್ತದೆ, ಲೆಕ್ಕಪತ್ರಗಳನ್ನು ಕೇಳುವುದಕ್ಕೆ ಸಾಧ್ಯವಿಲ್ಲದೆ ಹೋಗುತ್ತದೆ, ಕಷ್ಟವಾಗುತ್ತದೆ ಎಂದು ಒಪ್ಪಿಕೊಳ್ಳಬಹುದು. ಆದರೆ ಅಡ್ಡಿ ಆತಂಕಗಳು ಇದ್ದುವು. ಅದಕ್ಕೋಸ್ಕರವಾಗಿ ಲೆಕ್ಕಪತ್ರ ಕೊಡುವುದಕ್ಕಾಗುವುದಿಲ್ಲ, ಹೈಕೋರ್ಟಿನಲ್ಲಿದೆ, ಸುಪ್ರೀಂಕೋರ್ಟಿನಲ್ಲಿದೆ ಎಂದು ಹೇಳಬಹುದು.

ಹಾಗೆಯೇ ಎರಡನೆಯ ಸಬ್ ಕ್ಲಾಜ್‌ನ್ನೂ ಸಹ ಓದಿ ಸ್ವಾಮಿ.

"(ii) to rectify any error on account of the assessment of such assessee or person under this Act, instead of under the relevant repealed enactment, provided such assessment or re-assessment under the repealed enactment is made within a period of two years from the date of commencement of the Mysore Agricultural Income-Tax (Amendment) Act, 1962."

ಇವೊತ್ತಿನಿಂದ ಇನ್ನು ಎರಡು ವರ್ಷ. ಇದು ಯಾವ ತತ್ವ ?

4-30 P.M.

Mr. DEPUTY SPEAKER.—Judging from the sense of the House, I think I should extend the time by one hour. The Hon'ble Member Sri Muckannappa will kindly finish his speech within a minute or two. There are many members to speak.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಮಿನಿಟ್ ಮಾಡಬೇಡಿ, ಮೂರು-ನಾಲ್ಕು ಮಿನಿಟ್‌ಮಾಡಿ.

ಇದು ಏನು ತೋರಿಸುತ್ತದೆ, ೧೯೬೦ರವರೆಗೆ ಲೆಕ್ಕಾಚಾರ ಮಾಡಿಕೊಳ್ಳಬೇಕು. ೧೯೬೦ರವರೆಗೆ ಒಬ್ಬ ಮನುಷ್ಯ ಕಣ್ಣೆದುರಿಗೆ ಇದ್ದು, ಅಸೆಸ್ ಮಾಡದೆ ಇದ್ದರೆ, ಕಣ್ಣೆದುರಿಗೆ ಓಡಾಡಿದರೂ ಕಳ್ಳ ಅಲ್ಲ, ದೊಡ್ಡ ಮನುಷ್ಯ ಅಮೆಂಡ್‌ಮೆಂಟ್ ತಂದಮೇಲೆ ಎರಡು ವರ್ಷ ಟೈಮ್ ಕೊಡಬೇಡಿ. ಇದು ನ್ಯಾಯ, ಕೀರ್ತಿ ತರುತ್ತದೆ. ಇವೊತ್ತು ಎಲ್ಲಾ ರಾಜೀನಾಮೆ ಕೊಟ್ಟುಬಿಡಿ, ಅಮೆಂಡ್‌ಮೆಂಟ್ ಪಾಸ್‌ಮಾಡಿ ನಿಮ್ಮ ಗತಿ ಏನಾಗುತ್ತದೆ ನೋಡಿ. ಇಂಥ ದುರ್ಘರವಾದ. ಜನತೆಯನ್ನು ಇಕ್ಕಟ್ಟಿಗೆ ಸಿಕ್ಕಿಸುವಂಥ, ಶೋಷಣೆ ಮಾಡುವಂಥ, ರೈತನನ್ನು ಶೋಷಣೆ ಮಾಡುವಂಥ, ಕಾಯಿದೆ ಮಾಡಲು ಹೋಗಬಾರದು. ಆದ್ದರಿಂದ ಈ ಬಿಲ್ಲನ್ನು ವಾಪಸು ತೆಗೆದುಕೊಳ್ಳಬೇಕು. ಅದೂ ಅಲ್ಲದೆ ಈ ಬಿಲ್ಲಿಗೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಹಾಕಿಬಿಟ್ಟಿದ್ದಾರೆ, ಸತ್ತ ಮಗುವಿಗೆ ನಾಮಕರಣ ಮಾಡಿ ಕುಲಾವಿ ಹೊಲಿಸ ಬೇಕೆಂದಿದ್ದಾರೆ. ಗುಡಿಬಂಡೆಯಲ್ಲಿ ಮೊನ್ನೆ ಹೂತಿದ್ದ ಹಣವನ್ನು ತೆಗೆದು ಅದಕ್ಕೆ ಪೂಜೆ ಮಾಡಿದರಂತೆ. ಕಾಂಗ್ರೆಸ್ ಸರ್ಕಾರದವರೂ ಈಗ ಸತ್ತಿರುವ ಹೂತಿರುವ ಹೆಣ ಹೊರಕ್ಕೆ ತೆಗೆದು "ಓಶಿವ" ಎಂದು ಹೇಳಿ ಪೂಜೆಮಾಡುವುದಕ್ಕೆ ಹೋಗಿಬಿಟ್ಟರೆ ಇದು ಸರಿಯಲ್ಲ. ರೈತನಿಗೆ ಹಿಂಸೆ ಆಗುತ್ತದೆ, ಬಹಳ ಕಷ್ಟವಾಗುತ್ತದೆ. ಅಧಿಕಾರಿಗಳ ಕೈಯಲ್ಲಿ ಈ ಅಮೆಂಡ್‌ಮೆಂಟನ್ನು ಕೊಡಬೇಡಿ. ಇದೂ ಅಲ್ಲದೆ, ನಿಮ್ಮ ಪಕ್ಷದವರೇ ಆದಂಥ ನನ್ನ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಉತ್ತಮೋತ್ತಮರೂ ಮತ್ತು ಬುದ್ಧಿವಂತರೂ, ಮತ್ತು ಉಪಸಚಿವರೂ ಆದಂಥ ಷಂಷುದ್ದೀನ್ ಸಾಹೇಬರೇ ಇದು ಸರಿಯಿಲ್ಲ, ಇದು ನ್ಯಾಯವಲ್ಲ, ಯೋಗ್ಯವಲ್ಲ, ತರ್ಕಬದ್ಧವಲ್ಲ ಎಂದು ಅಪ್ಪಣೆ ಕೊಡಿಸಿದ್ದಾರೆ. ಅದಕ್ಕೋಸ್ಕರ ನಾನು ವಿನಯ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಶ್ರೀ ನಿಜಲಿಂಗಪ್ಪನವರು ಬರುವವರಾಗಿದ್ದಾರೆ, ಕಾನೂನು ಅವರ ಕೈಗೆಕೊಡಿ.

ಶ್ರೀ ಎಸ್ ಆರ್. ಕಂಠಿ.—ತರ್ಕಶುದ್ಧವಾಗಿದೆ ಯೆಂದು ಹೇಳಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಲಾಟದದೆ ಇದ್ದರೂ ಅವರು ಹೇಳಿದ್ದು ಪ್ರೊಸೀಡಿಂಗ್ಸ್‌ನಲ್ಲಿದೆ. ಸ್ವಾಮಿ, ಶ್ರೀ ನಿಜಲಿಂಗಪ್ಪನವರು ಬೇಕಾದರೆ ಮುಖ್ಯ ಮಂತ್ರಿಯಾಗಿ ಬಂದಮೇಲೆ, ಇದನ್ನು ಮಾಡಿಕೊಳ್ಳಲಿ. ನೀವು ಮಾಡಿದರೆ ನಿಮ್ಮ ಕಾಲದಲ್ಲಿ ಆಯಿತೆಂದು ಬಯಸಿಕೊಂಡು ಹೋಗುತ್ತೀರಿ.

Sri J. H. SHAMSUDDIN.—On a point of personal explantion. I did not say, that it was inequitable. I only said that equitable considerations should prevail before the amendment was accepted. There is a vast difference between this and that.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ಹತ್ತಿರ ಆಕ್ಸ್‌ಫರ್ಡ್ ಡಿಕ್ಷನರಿ ಇಲ್ಲ. ನನ್ನ ಹತ್ತಿರ ಇರುವುದು ಕನ್‌ಸಾಯಿಜ ಡಿಕ್ಷನರಿ ; ಅದನ್ನು ರೆಫರ್ ಮಾಡಿದರೆ ಅರ್ಥಗೊತ್ತಾಗುತ್ತದೆ.

ಮುಖ್ಯ ಮಂತ್ರಿಗಳಲ್ಲಿ ನಾನು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ಮುಖ್ಯ ಮಂತ್ರಿ ಪದವಿಯಿಂದ ಹೋಗುವವರಾಗಿದ್ದೀರಿ, ಇಂಥವರ ಕಾಲದಲ್ಲಿ, ಇಥಿಂಥ ವಿಷಪೂರಿತವಾದ ಜನರಿಗೆ ಹಿಂಸೆ ಕೊಡುವ, ಬಿಲ್ಲುಗಳು ಪಾಸ್ ಆದುವು ಎಂಬ ಅಪಕೀರ್ತಿಗೆ ತುತ್ತಾಗಬೇಡಿ. ದಯೆಯಿಟ್ಟು ಈ ಬಿಲ್ಲನ್ನು ವಾಪಸು ತೆಗೆದುಕೊಂಡು ಕಾಲಾವಕಾಶ ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ, ಈ ಅಗ್ರಿಕಲ ಚರಲ್ ಇನ್‌ಕಂಟ್ಯಾಕ್ಸನ್ನು ಹಿಂದಿನಿಂದ ಕೊಡಬೇಕೆಂದು ಹೇಳಿ, ಅದನ್ನು ಹಾಕತಕ್ಕಂಥ ಒಂದು ಬಿಲ್ಲನ್ನು ನೋಡಿದರೆ, ನಿಜವಾಗಿಯೂ, ಇಡೀ ದೇಶದ ರೈತರು, ದೇಶದ ಬೆನ್ನುಮೂಳೆಯಂತೆ ಎಂದು ಹೇಳುವ ಮಾತು ಮನಃಪೂರ್ವಕವಾಗಿ ಹೇಳುವುದು ಎಂದು ತಿಳಿದುಕೊಳ್ಳುವ ಹಾಗಿಲ್ಲ. ಇವೊತ್ತಿನ ದಿವಸ ದೇಹ ಮತ್ತು ದೇಶಕ್ಕೆ ಅನ್ನ ಕೊಡತಕಂಥ ಆ ರೈತನ ಬೆನ್ನುಮೂಳೆಯನ್ನು ಕೂಡ ಈ ಬಿಲ್ಲನ್ನು ತಂದು ಮುರಿಯಬೇಕೆಂದು ಹೊರಟಿದ್ದೀರಿ. ಆದ್ದರಿಂದ ಈ ಬಿಲ್ಲಿನ ಬಗ್ಗೆ ನಾವು ವಿಮರ್ಶೆಮಾಡಬೇಕಾಗಿದೆ. ಇವೊತ್ತು ರೈತ ಅರ್ಧಹೊಟ್ಟೆ ಊಟಮಾಡಿ, ಅರ್ಧಹೊತ್ತು ಉಪವಾಸವಿದ್ದು, ಕಷ್ಟಪಟ್ಟು ಹಣೆಬೆವರನ್ನು ನೆಲಕ್ಕೆ ಸುರಿಸಿ ಎಷ್ಟು ದುಡಿದರೂ ಕೇವಲ ಎರಡು ಮೂರು ಜನರನ್ನು ಗಂಡ, ಹೆಂಡತಿ, ಮಕ್ಕಳು ಇರುವ ಸಂಸಾರವನ್ನು ಕೂಡ ನಡೆಸಲು ಆಗುವುದಿಲ್ಲ. ಹೀಗಿರುವಾಗ ನಾವು ಒಂದು ವಿಚಾರ ವಿನಿಮಯ ಮಾಡಿ, ತೀರ್ಮಾನಕ್ಕೆ ಬರಬೇಕಾದುದು ನಮ್ಮ ಆದ್ಯ ಕರ್ತವ್ಯ. ಹಾಗಿಲ್ಲದೆಯೇ, ಏಕಾಏಕಿ ರೈತರ ಮೇಲೆ ಟ್ಯಾಕ್ಸ್ ಹಾಕತಕ್ಕಂಥಾದ್ದು ಅಷ್ಟು ಸಮಂಜಸವಲ್ಲ. ಇವೊತ್ತಿನ ದಿವಸ ಕಬ್ಬಿಣ ಕೊಳ್ಳಬೇಕೆಂದರೆ, ಅದು ಬೇಕಾದಷ್ಟು ದುಬಾರಿಇದೆ. ಉಪಕರಣಗಳನ್ನು ಕೊಳ್ಳಬೇಕಾಗಿದೆ. ಅದೂ ಅಲ್ಲದೆ ಅವರಿಗೆ ಬೇಕಾದ ಇತರ ಸಾಮಾನುಗಳು ಸಿಕ್ಕುತ್ತಾಇಲ್ಲ, ಅದರಿಂದ ಬ್ಲಾಕ್ ಮಾರ್ಕೆಟ್ಟಿನಲ್ಲಿ ತೆಗೆದು ಕೊಳ್ಳಬೇಕಾದಂಥ ಸಂಧರ್ಭಗಳೂ ಒದಗಿವೆ. ಹೀಗಿರುವಾಗ ನಾವು ಯೋಚನೆ ಮಾಡಬೇಕಾಗಿದೆ. ಈಗಾಗಲೇ ರೈತರು ಕಂದಾಯ ಕೊಡುತ್ತಿದ್ದಾರೆ, ಆಮೇಲೆ ಹೆಲ್ತ್ ಸೆಸ್ ಕೊಡುತ್ತಾಇದ್ದಾರೆ, ಇರ್ರಿಗೇಷನ್ ಸೆಸ್‌ಕೊಡುತ್ತಾ ಇದ್ದಾರೆ, ಕಂದಾಯಕ್ಕೆತಕ್ಕಂತೆ ನಾನಾರೂಪವಾದ ಸೆಸ್ಸುಗಳನ್ನು ವಸೂಲು ಮಾಡುವ ಸಂಧರ್ಭವಿದೆ. ಹೀಗಿರುವಾಗ ಓದಲು ಬರೆಯಲು ಬಾರದೆ ಇರತಕ್ಕಂಥ ನಿರಪರಾಧಿಗಳಾದ ರೈತರಮೇಲೆ ಈ ಒಂದು ಟ್ಯಾಕ್ಸನ್ನು ಹೇರುತ್ತೇವೆಂದು ಹೋಗುವುದು ಸರಿಯೇ ಎಂದು ಯೋಚನೆ ಮಾಡಬೇಕಾಗಿದೆ. ಅದಕ್ಕೆ ಮಿಗಿಲಾಗಿ ಓದುಬರಹ ಬಾರದೆ ಇದ್ದವರನ್ನು ಲೆಕ್ಕ ಇಡಿ ಅನ್ನತಕ್ಕಂಥಾದ್ದು ಬಹಳ ಕಠಿಣ ಪರಿಸ್ಥಿತಿಯಾಗುತ್ತದೆ, ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಬಸಪ್ಪನವರೂ ಶ್ರೀಮಾನ್ ಮುಕ್ಕಣ್ಣಪ್ಪನವರೂ ಈ ವಿಷಯದ ಮೇಲೆ ಹೇಳಿದರು ಸಮಂಜಸವಾಗಿರತಕ್ಕಂಥ ವಿಷಯಗಳನ್ನು ಯಾರಾದರೂ ಹೇಳಲಿ ಅವರು ಹೇಳುವ ಒಳ್ಳೆಯ ಅಭಿಪ್ರಾಯಗಳನ್ನು ತೆಗೆದು ಕೊಳ್ಳಬೇಕು. ಸದ್ಯಕ್ಕೆ ಈ ಬಿಲ್ಲನ್ನು ತೆಗೆದುಕೊಳ್ಳದೆ, ಸ್ವಲ್ಪ ಕಾಲಾವಕಾಶವನ್ನು ಕೊಟ್ಟು ಇದನ್ನು ಮುಂದಕ್ಕೆ ತಂದು ವಿಮರ್ಶೆ ಮಾಡೋಣ. ಈ ಇನ್‌ಕಂಟ್ಯಾಕ್ಸ್ ಹೊರೆಯನ್ನು ರೈತನ ಮೇಲೆ ಹಾಕತಕ್ಕಂಥಾದ್ದು ಅಷ್ಟು ಸರಿಯಲ್ಲ, ನ್ಯಾಯವಲ್ಲ. ಈ ಬಿಲ್ಲನ್ನು ಮುಂದಕ್ಕೆ ಹಾಕಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ, ನಾನು ಮನಃಪೂರ್ವಕವಾಗಿ ರೈತನ ಪರವಾಗಿ ಕೈಮುಗಿದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದಪ್ಪ (ತಿಪಟೂರು).—ಅಧ್ಯಕ್ಷ ಮಹಾಶಯರೇ, ಈಗ ವ್ಯವಸಾಯ ಆದಾಯ ತೆರಿಗೆ ಮೇಲೆ ತಂದಿರುವ ತಿದ್ದುಪಡಿ ಮಸೂದೆಯನ್ನು, ಈ ತಾತ್ಕಾಲಿಕ ಸರ್ಕಾರ ತಂದಿರುವುದನ್ನು ನೋಡಿದರೆ ನನಗಂತೂ ವಿಷಾದವಾಗುತ್ತದೆ. ಮಹಾಚುನಾವಣೆಗಳು ನಡೆದು ಆಗಲೇ ಕೆಲವು ತಿಂಗಳುಗಳು ಉರುಳಿದರೂ ನಿಜವಾದ ಸರ್ಕಾರವನ್ನು ರಚಿಸುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಈ ಅಮೆಂಡ್‌ಮೆಂಟ್ ಎಲ್ಲಿದೆ ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಏಕಾಏಕಿ ಬರೀ ಅಮೆಂಡ್‌ಮೆಂಟ್ ಮೇಲೆ ಹೇಳಿದರೆ ಸ್ವಾರಸ್ಯವಿರುವುದಿಲ್ಲ, ಹಿಂದೆ ಮುಂದೆ ಸೇರಿಸಬೇಕು. ಭದ್ರವಾದ, ಸುಭದ್ರವಾದ, ವಿಶಾಲ ತಳಹದಿಯ ಮೇಲೆ ಸರ್ಕಾರವನ್ನು ಇನ್ನೂ ರಚಿಸುತ್ತೇವೆಂದು ಹೇಳುತ್ತಿರತಕ್ಕಂಥಾದ್ದು, ಮೊದಲನೆಯದಾಗಿ ಎಲೆಕ್ಷನ್ನಿನಲ್ಲಿ ಓಟುಕೊಟ್ಟಂಥ ಜನಕ್ಕೆ ಕೊಟ್ಟ ಕಾಣಿಕೆ. ವ್ಯವಸಾಯ ಆದಾಯ ತೆರಿಗೆ ತಿದ್ದುಪಡಿ ಮಸೂದೆಯನ್ನು ತಂದಿದ್ದು ಸರ್ವಥಾ ಅನ್ಯಾಯ. ನಿಜವಾಗಿಯೂ ಒಂದು ಮನೆಯಲ್ಲಿ, ಸಂಸಾರದಲ್ಲಿ ಏನು ಖರ್ಚಾಗುತ್ತದೆಂದು ನೋಡಿದ್ದರೆ, ಈ 18 ವರ್ಷದ ವಯೋಮಿತಿ ಇದರಲ್ಲಿ ಕಾಣಿಸುತ್ತಿರಲಿಲ್ಲ. ಸಾಮಾನ್ಯವಾಗಿ ಹೆಚ್ಚು ಖರ್ಚು ಬರುವುದು, 18 ವರ್ಷದ ವಯೋಮಿತಿಯೊಳಗಿರುವ ಜನ ಯಾವ ಸಂಸಾರದಲ್ಲಿರುತ್ತಾರೆಯೋ, ಅಲ್ಲಿ ಆ ವಯೋಮಿತಿ ಮೀರಿದ ಜನಕ್ಕೆ ಜಾಸ್ತಿ ಖರ್ಚು ಬರುವುದಿಲ್ಲ. ಈಗ ಕೋ-ಆಪರೇಟೀವ್ ಬೇಸಿಸ್ ಮೇಲೆ ಅಗ್ರಿಕಲ್ಚರ್ ಮಾಡಬೇಕೆಂದು ಹೇಳಿದ್ದೀರಿ. ಇಲ್ಲಿ ಅಗ್ರಿಕಲ್‌ಚರ್ ಇನ್‌ಕಮ್ ಟ್ಯಾಕ್ಸ್ ಗೋಸ್ಕರ ಭಾಗ ಮಾಡಬೇಕೆಂದು ಹೇಳುತ್ತೀರಾ! ಒಂದು ಕಡೆ ಹೀಗೆ ಹೇಳಿ ಇನ್ನೊಂದು ಕಡೆ ಕೋ-ಆಪರೇಟೀವ್ ಫಾರ್ಮ್‌ಮಾಡಿ ವ್ಯವಸಾಯಮಾಡಿ ಎಂದು ಹೇಳುತ್ತೀರ ? ಒಂದೊಂದು ಸಂಸಾರದಲ್ಲಿ 70-80 ಜನ ಇರುತ್ತಾರೆ. ಅದರಲ್ಲಿ ತಂದೆ ತಾಯಿ ಇಬ್ಬರು ಇದ್ದರೆ, 18 ವಯಸ್ಸಿಗೆ ಮೀರದೇ ಇದ್ದವರೇ ಜಾಸ್ತಿ ಇರುತ್ತಾರೆ.

ಇಂಥ ಒಂದು ವಯೋಮಿತಿಯನ್ನು ವಿಧಿಸುವುದೆಂದರೆ ಪರಿಜ್ಞಾನವಿರತಕ್ಕ ಯಾವ ಸರ್ಕಾರವೂ ಈ ರೀತಿ ಮಾಡಲಾರದೆಂದು ತಿಳಿಸಲಿಚ್ಛಿಸುತ್ತೇನೆ. ಆದರೆ ಈ ಒಂದು ತಿದ್ದುಪಡಿಯನ್ನು ಒಪ್ಪಿಕೊಂಡರೂ ಸಹ ಇದರಿಂದ ಬರತಕ್ಕ ಆದಾಯ ತೀರಾ ಅಲ್ಪವಾದುದೆಂದು ಬೇರೆ ಹೇಳುತ್ತಿದ್ದಾರೆ. ಇಂಥ ಒಂದು ಅಲ್ಪಾದಾಯಕ್ಕಾಗಿ ರೈತನನ್ನು ಸರ್ಕಾರಿ ನೌಕರರ ಕೈಗೆ ಸಿಕ್ಕಿಸಿ ಅವರಿಗೆ ಕಿರುಕುಳ ಕೊಡತಕ್ಕದ್ದು ಸರ್ವಥಾ ಸಾಧುವಾದುದಲ್ಲ. ನಮ್ಮ ರೈತನ ಸ್ಥಿತಿಯಾದರೂ ಹೇಗಿದೆ? ಅವರಿಗೆ ಈ ತೆರಿಗೆಯ ಸಂಬಂಧದಲ್ಲಿ ಭರ್ತಿ ಮಾಡಬೇಕಾದ ಆ ಕನ್ನಡ ಫಾರಂಗಳೇನಿವೆ—ಅವುಗಳನ್ನು ಭರ್ತಿಮಾಡುವುದಕ್ಕೂ ಸಹ ನಮ್ಮ ರೈತರಿಗೆ ತಿಳಿಯದು. ಅವರು ಈ ಕೆಲಸಕ್ಕಾಗಿ ಗುಮಾಸ್ತರ ಹತ್ತಿರ ಹೋಗಬೇಕು– ಅವರಿಗೆ ಮಸಿ ಕಾಣಿಕೆ ಕೊಡಬೇಕು, ಅನಂತರ ಫಾರಂ ಭರ್ತಿಮಾಡಿಸಿ ರಿಟೈರ್ ಆದ ಮಂತ್ರಿಗಳು ಯಾರು ಲಾಯರ್ ಕೆಲಸಕ್ಕಿಳಿದಿದ್ದಾರೋ ಅಂಥವರನ್ನು ಹುಡುಕಿಕೊಂಡು ಹೋಗಿ ಅವರಿಗೆ ವಕಾಲತ್ ಕೊಟ್ಟು ಕೋರ್ಟಿಗೆ ತಿರುಗಬೇಕು. ಅವರ ಸ್ಥಿತಿ ಹೀಗಿದೆ! ಇದಕ್ಕೆ ಸರಿಯಾಗಿ ಮಂತ್ರಿಪದವಿಯಿಂದ ರಿಟೈರಾದವರು ಲಾಯರ್ ಕೆಲಸಕ್ಕೆ ಇಳಿಯುತ್ತಿರುವುದೂ ಸಹ ದಿನದಿನಕ್ಕೂ ಏರುತ್ತಿದೆ. ಈ ದಿವಸ ಇಂಥ ಒಂದು ತೆರಿಗೆಯನ್ನು ವಿಧಿಸಿದರೆ ಇದರ ಪರಿಣಾಮ ಏನಾಗುತ್ತದೆ, ಇದರ ಇತಿ ಮಿತಿ ಎಲ್ಲಿಯವರೆಗೆ ಹೋಗುತ್ತದೆ ಎಂಬುದೊಂದನ್ನೂ ಆಲೋಚನೆ ಮಾಡದೆ ಇಂಥ ಮಸೂದೆಗಳನ್ನು ತರುವುದು ಅನುಚಿತ. ಆದುದರಿಂದ ಇದನ್ನು ಮುಖ್ಯಮಂತ್ರಿಗಳು ವಾಪಸ್ಸು ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ. ಈ ದಿವಸ ಈ ಅಗ್ರಿಕಲ್‌ಚರ್ ಇನ್‌ಕಂ ಟ್ಯಾಕ್ಸ್ ಹಾಕಿದರೆ ಇದರ ಪರಿಣಾಮ ಏನಾಗುತ್ತದೆಂದರೆ ನಾನು ಹಿಂದೆ ಆಗಲೇ ಹೇಳಿರುವ ಆ ಶ್ಯಾನುಭೋಗರ ಕಥೆ ಪ್ರಸಂಗವೇನಿದೆಯೋ ಅದೇ ಆಗುವುದು. ಯಾರೋ ಒಬ್ಬ ಡೆಪ್ಯುಟಿ ಕಮಿಷನರ್ ಒಬ್ಬ ಶ್ಯಾನುಭೋಗನಿಗೆ ಏನೋ ಜುಲ್ಮಾನೆ ಹಾಕಿದಾಗ ಆತ ಇಂಥ ಜುಲ್ಮಾನೆ ವಿಧಿಸುವುದರಿಂದ ಕೆಡುಕಾಗುವುದು ರೈತರಿಗೇ ವಿನಾ ನನಗೇನೂ ಅಲ್ಲ ಎಂದು ಹೇಳಿದ್ದನಂತೆ. ಏತಕ್ಕೆಂದರೆ ಶ್ಯಾನು ಭೋಗನಮೇಲೆ ಬೀಳತಕ್ಕ ಜುಲ್ಮಾನೆಗಳೆಲ್ಲ ರೈತರ ಮೇಲೆ ಹಂಚಿಕೆ ಆಗುತ್ತವೆ. ಆದ್ದರಿಂದ ಶ್ಯಾನುಭೋಗನಿಗಾದ ತೊಂದರೆಯೇನು? ಅದರಂತೆಯೇ ಈ ಸಂದರ್ಭವೂ ಬರುತ್ತದೆ. ಆದುದರಿಂದ ಸರ್ಕಾರದವರು ದಯೆ ಇಟ್ಟು ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏನೋ ಆ ರಾಷ್ಟ್ರಾಧ್ಯಕ್ಷರ ಚುನಾವಣೆ ನಡೆಯಬೇಕಾಗಿ ಬಂದುದರಿಂದ ಈ ಅಧಿವೇಶನವನ್ನು ಕರೆಯಬೇಕಾಗಿ ಬಂತು. ಆ ನೆಪಕ್ಕಾಗಿ ಈಗ ಇಂಥ ಚಿಲ್ಲರೆ ಮಸೂದೆಗಳನ್ನು ತಂದು ಕಾಲಹರಣ ಮಾಡಬಾರದು. ಪಾಸ್ ಮಾಡಬೇಕಾಗಿದ್ದ ಮುಖ್ಯವಾದ ಬಿಲ್‌ಗಳು ಅನೇಕವಿದ್ದುವು. ಆದರೆ ಅಂಥವುಗಳೊಂದನ್ನೂ ತರದೆ ಇಂಥ ಕಾಲಹರಣ ಮಸೂದೆಗಳನ್ನು ತಂದಿರುವುದು ಬಹಳ ವ್ಯಸನಕರವಾದದು. ಆದಕಾರಣ ಇಂಥ ಬಿಲ್ಲುಗಳನ್ನು ಜಾಗ್ರತೆ ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗ ಈ ಬಿಲ್ಲನ್ನು ಸಭೆಯ ಮುಂದೆ ತಂದಿರತಕ್ಕ ಮಂತ್ರಿಗಳು ಈ ಪದವಿಯನ್ನು ಇಟ್ಟುಕೊಂಡು ಇರತಕ್ಕದ್ದು ಕೇವಲ ಎರಡು ದಿವಸಗಳು ಮಾತ್ರ. ಅಷ್ಟಕ್ಕಾಗಿ ಅವರೇಕೆ ಜನಗಳಿಂದ ಒಂದು ಕೆಟ್ಟ ಹೆಸರನ್ನು ತೆಗೆದುಕೊಳ್ಳಬೇಕು? ಆದ್ದರಿಂದ ಅವರು ದಯವಿಟ್ಟು ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಸ್ವಾಮಿ, ಈ ತಿದ್ದುಪಡಿಯ ಬಗ್ಗೆ ನನ್ನ ಅನೇಕ ಮಾನ್ಯ ಸ್ನೇಹಿತರುಗಳು ಈಗಾಗಲೇ ಬಹಳ ಚರ್ಚೆಯನ್ನು ನಡೆಸಿದ್ದಾರೆ. ಆದರೆ ಈಗ ನಮ್ಮ ಸಭೆಯ ಮುಂದೆ ಇರತಕ್ಕ ಮುಖ್ಯ ಪ್ರಶ್ನೆ ಏನೆಂದರೆ—ಸರ್ಕಾರದವರು ಈಗ ರೈತರಮೇಲೆ ವಿಧಿಸಬೇಕೆಂದು ಇರತಕ್ಕ ತೆರಿಗೆಯನ್ನು ನಾವುಗಳು ಒಪ್ಪಿಕೊಳ್ಳಬೇಕೇ ಅಥವಾ ಬಿಡಬೇಕೇ ಎಂಬುದು. ಈ ಒಂದು ತಿದ್ದುಪಡಿಯನ್ನು ಕಾಂಗ್ರೆಸ್ಸಿನವರು ತಮ್ಮ ಒಂದು ರಕ್ಷಣೆಗೋಸ್ಕರವಾಗಿ ಮಾಡಿ ಕೊಳ್ಳುತ್ತಿದ್ದಾರೆಂಬುದಾಗಿ ಕಾಣುತ್ತಿದೆ. ಇದರಲ್ಲಿರತಕ್ಕ ಒಂದು ಬಹಳ ಮುಖ್ಯವಾದ ಅಂಶವೇನೆಂದರೆ ನ್ಯಾಯಾಂಗಕ್ಕೂ–ಬೇರೆ ಬೇರೆ ಇರತಕ್ಕ ಶಾಸನಾಂಗಕ್ಕೂ ಒಂದು ಹೊಂದಾವಣೆ ಇರಬೇಕಾದ್ದು ಬಹಳ ಮುಖ್ಯವಾದದ್ದು. ಅದರೆ ಈಗಾಗಲೆ ಶ್ರೀ ಸಿ. ಜೆ. ಮುಕ್ಕಣ್ಣಪ್ಪನವರು ಹೇಳಿದ ಹಾಗೆ ನ್ಯಾಯಾಂಗದವರು ಮಾಡಿರತಕ್ಕ ತೀರ್ಮಾನದ ಬಗ್ಗೆ ಶಾಸನಾಂಗದವರು ಹಿಂದಿನ ಬಾಗಿಲಿನಿಂದ ಬಂದು ಹಿಂದೆಲ್ಲ ಇವರು ಏನೇನು ಅನ್ಯಾಯಗಳನ್ನು ಮಾಡಿದ್ದಾರೋ–ಅಕ್ರತ್ಯಗಳನ್ನು ಮಾಡಿದ್ದಾರೋ ಅಂಥ ಅನ್ಯಾಯ–ಅಕ್ರತ್ಯಗಳ ಬಗ್ಗೆ ಇವರನ್ನು ಯಾವ ನ್ಯಾಯಾಂಗದವರೂ ಮಾತನಾಡಿಸದಂತೆ ಒಂದು ಷೆಲ್ಟರನ್ನು ಪಡೆದುಕೊಳ್ಳಲು ಆ ಒಂದು ಉದ್ದೇಶಕ್ಕಾಗಿ ಈಗ ಈ ತಿದ್ದುಪಡಿಯನ್ನು ತಂದಿದ್ದಾರೆಂದು ನಾನು ವಿಧಿಯಿಲ್ಲದೆ ಹೇಳಬೇಕಾಗಿದೆ. ಈ ದಿವಸ ದೇಶದಲ್ಲಿ ನಡೆಯತಕ್ಕ ರಾಜ್ಯಾಡಳಿತದ ಭಾರವನ್ನು ಹೊತ್ತಿರುವವನು ಆ ರೈತನು. ಆ ರೈತ ಕೊಡತಕ್ಕ ಕಂದಾಯ–ತೆರಿಗೆಗಳಿಂದ ಈ ರಾಜ್ಯಾಡಳಿತ ನಡೆಯುತ್ತಿದೆ. ಅಧಿಕಾರಕ್ಕೆ ಬರುವ ಮುನ್ನ ಈ ಕಾಂಗ್ರೆಸ್ ಭಕ್ತಾದಿಗಳು ರೈತರಿಗೆ ನೀವು ಕಂದಾಯವನ್ನು ಕೊಡುವುದೇಬೇಡ ಎಂದು ಆಗ ಹೇಳುತ್ತಿದ್ದರು. ಆದರೆ ಈ ದಿವಸ ಆ ಕಂದಾಯವನ್ನು ಕೈಬಿಡುವುದೂ ಹೋಗಿ ಅದರ ಜೊತೆಗೆ ನಾನಾ ತೆರಿಗೆಗಳನ್ನು ಹಾಕುತ್ತಿದ್ದಾರೆ. ಹೀಗೆ ಈ ಹೊತ್ತು ಆಡಳಿತವನ್ನು ಕೈಯಲಿಟ್ಟುಕೊಂಡಿರತಕ್ಕ ಕಾಗ್ರೆಂಸ್ ಪಕ್ಷ ಈ ಹಿಂದೆ ಏನೇನು ಹೇಳಿಕೆಗಳನ್ನು ಮಾಡಿತ್ತೋ ಅದಕ್ಕೆ ತದ್ ವಿರುದ್ಧವಾಗಿ ನಡೆಯುತ್ತಿದೆ. ಈ ದಿವಸ ಈ ತೆರಿಗೆ ಶಾಸನದ ವಿಚಾರದಲ್ಲಿ ಅನೇಕ ಹೈಕೋರ್ಟುಗಳು ಅನೇಕ ವಿರುದ್ಧ ತೀರ್ಮಾನಗಳನ್ನು ಕೊಟ್ಟಿರುತ್ತವೆ–ಅದಕ್ಕಾಗಿ ಈಗ ಈ ತಿದ್ದುಪಡಿಗಳನ್ನು ತರಲಾಗಿದೆ ಎಂದು ಹೇಳಿದ್ದಾರೆ. ಆ ರೀತಿ ಹೈಕೋರ್ಟಿನವರು ವಿರುದ್ಧವಾದ ತೀರ್ಮಾನಗಳನ್ನು ಕೊಟ್ಟಿರಬೇಕಾಗಿದ್ದರೆ ಈ ಹಿಂದೆ ಈ ಬಿಲ್ಲನ್ನು ಎಷ್ಟು ಆತುರಾತುರದಿಂದ ಶಾಸನ ಕಡಿತಕ್ಕೇರಿಸಿದ್ದಾರೆಂಬುದಕ್ಕೆ ಬೇರೆ ರುಜುವಾತೇ ಬೇಕಾಗಿಲ್ಲ. ಈ ಹಿಂದೆ ಸರ್ಕಾರದವರು ಮಾಡಿರತಕ್ಕ ತಪ್ಪು–ನೆಪ್ಪುಗಳನ್ನು ಸರಿಪಡಿಸಲು ಜನರ ಮೇಲೆ ಹೊರೆ ಹೇರಬೇಕಾಗಿದೆ ಎಂದು ಹೇಳುವುದು ನ್ಯಾಯ ಬಾಹಿರವಾದ ವಿಚಾರ. ಈ ಕಾಂಗ್ರೆಸ್ ಪಕ್ಷ ಆಡಳಿತ ವಹಿಸಿಕೊಂಡ ಈ ೧೫ ವರ್ಷಗಳ ಅವಧಿಯಲ್ಲಿ ದೇಶಕ್ಕೆ ಉಂಟಾಗಿರತಕ್ಕ ನಷ್ಟ ಅಷ್ಟಿಷ್ಟಲ್ಲ. ಅಷ್ಟಾದರೂ ನಮಗೆ ಇಲ್ಲಿಯ ತನಕ ಒಂದು ಸುಭದ್ರವಾದ ಆಡಳಿತ ನಡೆಸತಕ್ಕಂಥ ಸರ್ಕಾರ ಸಿಕ್ಕಲು ಸಾಧ್ಯವಾಗಿಲ್ಲ. ಈ ದೇಶದಲ್ಲಿ ರೈತರು ಕಂದಾಯ ಕೊಡತಕ್ಕದ್ದೇ ಅನ್ಯಾಯವೆಂದು ಹೇಳುತ್ತಿರುವಾಗ ಇವರ ಮೇಲೆ ಸಾಲದ್ದಕ್ಕೆ ಈ ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಬಿದ್ದುದು ದೇಶದ ದುರದೃಷ್ಟ! ನಮ್ಮ ದುರದೃಷ್ಟ. ಇದು ಬಹಳ ಶೋಚನೀಯ. ಆಯಾ

(ಶ್ರೀ ಕೆ. ಲಕ್ಕಪ್ಪ)

ರೈತರಿಗೆ ನೀವೇನೂ ಕಂದಾಯ ಕೊಡಬೇಡಿ ಎಂದು ಹೇಳುತ್ತಿದ್ದವರು ಈ ದಿವಸ ಅದರ ಜೊತೆಗೆ ಮತ್ತಿಷ್ಟು ತೆರಿಗೆಕೊಡಿ ಎಂದು ಕೇಳುತ್ತಿದ್ದಾರೆ. ಅವರು ಹೇಳಿರುವಂತೆ ಈಗ ಕಂದಾಯವನು ಮಾಫೀ ಮಾಡದ ಹೊರತು ಈ ತೆರಿಗೆಯನ್ನು ಯಾರೂ ಕೊಡಕೂಡದು. ಆ ದಿವಸ ಗಾಂಧಿಯವರು ಏನು ಹೇಳುತ್ತಿದ್ದರು? ನಾವು ರೈತರಿಗೆ ತೊಂದರೆ ಕೊಡುವುದಿಲ್ಲ_ಅವರಿಂದ ಕಂದಾಯವಸೂಲ್ಮಾಡುವುದಿಲ್ಲ ಎಂದು ಹೇಳುತ್ತಿದ್ದರು. ಹಾಗೆ ಹೇಳುತ್ತಿದ್ದ ಜನರೇ ಈ ದಿವಸ ದೇಶದ ಎಲ್ಲಾ ಆಗು_ಹೋಗುಗಳ ಜವಾಬ್ದಾರಿಯನ್ನು ರೈತರ ಮೇಲೆ ಹೇರಿ ಅವರಿಂದ ಹಣ ವಸೂಲಿಮಾಡಲು ಈಗ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದರಿಂದ ರೈತ ಹಾಳಾಗುತ್ತಾನೆ. ರೈತ ಹಾಳಾದ ಮೇಲೆ ದೇಶವೂ ಹಾಳಾದಂತೆಯೇ. ಆದುದರಿಂದ ಈಗ ಸರ್ಕಾರದವರು ಮಾಡಿರತಕ್ಕ ಈ ಯೋಚನೆಗಳೆಲ್ಲ ದೇಶವನ್ನು ಹಾಳು ಮಾಡತಕ್ಕವುಗಳಾಗಿರುತ್ತವೆಂದು ಹೇಳ ಬಯಸುತ್ತೇನೆ. ಮೊನ್ನೆತಾನೆ ನಡೆದಿರುವ ಚುನಾವಣೆಗಳಲ್ಲಿ ಆದ ನಷ್ಟವನ್ನು ಭರ್ತಿಮಾಡಿಕೊಳ್ಳುವುದಕ್ಕಾಗಿ ಮಾಡಿರತಕ್ಕ ಯೋಚನೆ ಎಂದು ಹೇಳಿದರೂ ತಪ್ಪೇನಿಲ್ಲ. ಅಗ್ರಿಕಲ್‌ಚರಲ್ ಟ್ಯಾಕ್ಸ್‌ನ್ನು ಹಾಕಬೇಕಾಗಿದ್ದರೆ ಭೂಮಿಯ ಸಾರ_ಅದು ಇರತಕ್ಕ ವಾತಾವರಣ, ಅಲ್ಲಿ ಬೆಳೆಯತಕ್ಕ ಬೆಳೆ ಇತ್ಯಾದಿಗಳು ಬಹಳ ಪ್ರಾಮುಖ್ಯವಾದ ವಿಚಾರಗಳು. ಈ ಬಗ್ಗೆ ಯಾವ ಒಂದು ಷೆಡ್ಯೂಲೂ ಇಲ್ಲ. ಇಂಥ ವಿಚಾರಗಳನ್ನೆಲ್ಲ ಕೈಬಿಟ್ಟುವಯೋಮಿತಿಯ ಕಡೆಗೆ ಗಮನ ಕೊಟ್ಟಿದ್ದಾರೆ. ಇದು ಎಂಥ ಅಭ್ಯಾಸ! ಇಷ್ಟೇ ಅಲ್ಲ_ಇವರು ಒಂದು ಕಡೆ ಕೋ ಆಪರೇಟೀವ್ ಫಾರಂಗಳನ್ನು ಮಾಡಬೇಕೆಂದು ಹೇಳುತ್ತಿದ್ದಾರೆ-ಇನ್ನೊಂದು ಕಡೆ ಫ್ಯಾಮಿಲಿ ಹೋಲ್ಡಿಂಗ್ ನಿಗದಿ ಮಾಡಬೇಕೆಂದು ಹೇಳುತ್ತಿದ್ದಾರೆ. ಮತ್ತೊಂದು ಜಾಯಿಂಟ್ ಫ್ಯಾಮಿಲಿಯನ್ನು ಛಿದ್ರ ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಕಾರಣ ಅಸೆಸ್‌ಮೆಂಟನ್ನು ಇವೇಡ್ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ಇವರು ಆಚರಿಸತಕ್ಕ ಕಾರ್ಯಕ್ರಮಗಳು ಮುಖ್ಯ ಮಸೂದೆಯ ಧ್ಯೇಯ_ತತ್ವಗಳಿಗೆ ಅಗಲಿ ಹೋಗಿರುವಂತೆ ಕಾಣುತ್ತಿದೆ. ಇಂಥ ಮಸೂದೆಗಳಿಂದ ರೈತರ ಹಕ್ಕುಭಾದ್ಯತೆಗಳ ರಕ್ಷಣೆ ತಪ್ಪಿ ದೇಶದಲ್ಲಿ ಅನಾಯಕತ್ವ ಮೂಡಲು ದಾರಿಯಾಗುತ್ತದೆ. ಆದಕಾರಣ ನಾನು ಈ ತಿದ್ದುಪಡಿಯನ್ನು ತೀವ್ರವಾಗಿ ವಿರೋಧಿಸಿ ಈ ತಿದ್ದುಪಡಿಯನ್ನು ತಜ್ಞರ ಅಭಿಪ್ರಾಯಕ್ಕಾಗಿ ಸಲೆಕ್ಟ್ ಕಮಿಟಿಗೆ ಹಾಕಿ ಇದರಿಂದ ದೇಶದಲ್ಲಿರತಕ್ಕ ಸರ್ವರಿಗೂ ಒಂದು ಅನುಕೂಲ ದೊರೆಯತಕ್ಕ ರೀಯಲ್ಲಿ ಇದನ್ನು ತಯಾರಿಸಿ ತರಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು II).-ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಬಡವರಾದ ಅನೇಕ ಸಣ್ಣ ಸಣ್ಣ ಭೂಮಾಲೀಕರಿಗೆ ತುಂಬಾ ಅನ್ಯಾಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಹೊಸ ಮೈಸೂರು ರಾಜ್ಯದಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯು ಸೇರ್ಪಡೆಯಾದ ನಂತರ ಈ ಬಿಲ್ಲಿನ ವ್ಯಾಪಕತೆಯ ಮೂಲಕ ಬಡ ಭೂಮಾಲೀಕರನ್ನು ಅನಾವಶ್ಯಕವಾಗಿ ದಂಡಿಸಲಿಕ್ಕೆ ಮಾಡಿದ ಹಾಗೆ ಇದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧಾರಣವಾಗಿ ಅಳಿಯ ಸಂತಾನದ ಪದ್ಧತಿ, ಮರು ಮಕ್ಕಳ ಪದ್ಧತಿ ಜಾರಿಯಲ್ಲಿದೆ. ಈ ಕಾನೂನಿನಿಂದ ಅವರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬರುತ್ತದೆ. ಈ ಹೊಸ ಕಾನೂನು ಜಾರಿಗೆ ಬಂದರೆ ನಿಜವಾಗಿಯೂ ಅನೇಕ ಅವಿಭಕ್ತ ಕುಟುಂಬಗಳು ಹೆಚ್ಚಾಗಿ ಪಾಲು ಆಗಲು ಅವಕಾಶ ಕೊಟ್ಟಂತಾಗುವುದು. ಇದರ ಪರಿಣಾಮವಾಗಿ ಹೆಚ್ಚು ದಾರಿದ್ರ್ಯ ಬೆಳೆಯಲು ಎಡೆಮಾಡಿಕೊಟ್ಟಂತಾಗುವುದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಮಸೂದೆಯಲ್ಲಿ 18 ವರ್ಷ ಪ್ರಾಯದ ಮಿತಿಯೊಂದನ್ನು ಗೊತ್ತುಮಾಡಿರುವುದು ಸರಿಯೋ ತಪ್ಪೋ ತಿಳಿಯುವುದಿಲ್ಲ. ೧೮ವರ್ಷ ಪ್ರಾಯದೊಳಗಿನವರಿಗೆ ವಿನಾಯಿತಿಯಿದೆ. 18 ವರ್ಷ ಪ್ರಾಯದ ಮೇಲ್ಪಟ್ಟವರಿಗೆ ವಿನಾಯಿತಿಯಿಲ್ಲ ಎಂದಿದೆ. ಈ ಪ್ರಾಯದ ಗಡಿ ಯಾವ ಆಧಾರದ ಮೇಲೆ ಗೊತ್ತು ಮಾಡಿರುವುದು? ನಮ್ಮ ಸರಕಾರ ಮಾಡುತ್ತಿರುವುದನ್ನು ನೋಡಿದರೆ ನಿಜವಾಗಿಯೂ ಅವರು ಜನತೆಯನ್ನು ಕಳೆದುಕೊಳ್ಳುತ್ತಿದ್ದಾರೆಂದು ಅನ್ನಿಸುತ್ತದೆ. ಇದು ಸಂತೋಷಪಡತಕ್ಕ ವಿಷಯವಲ್ಲ. ದೇಶದ ಸಂಪತ್ತನ್ನು ಸರಿಸಮಾನವಾಗಿ ಎಲ್ಲರೂ ಹಂಚಿಕೊಳ್ಳುವುದಕ್ಕೆ ಒಂದು ಕಾನೂನು ಮಾಡಿದರೆ ಅದರಿಂದ ಜನರಿಗೆ ಪ್ರಯೋಜನವಾಗಲಾರದು, ಅವಸರ ಅವಸರದಲ್ಲಿ ಯಾವ ಕೆಲಸವನ್ನು ಮಾಡಿದರೂ ಅದರಿಂದ ಜನರಿಗೆ ಪ್ರಯೋಜನವಾಗಲಾರದು, ಈ ಪರ್ಯಾಯ ಸಮಯದಲ್ಲಿ ಅವಸರ ಅವಸರದಲ್ಲಿ ಈ ಕಾನೂನನ್ನು ಪಾಸುಮಾಡದೆ, ಇದನ್ನು ಪೂರ್ತಿಯಾಗಿ ಪರಿಶೀಲನೆ ಮಾಡುವದಕ್ಕೋಸ್ಕರ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಕೊಡಬೇಕು ಎಂಬ ನನ್ನ ಅಭಿಪ್ರಾಯವನ್ನು ಈ ಸಭೆಯ ಮುಂದೆ ಇಡಲು ಇಚ್ಛಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತಾ ಒಂದೆರಡು ಅಂಶಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಮಸೂದೆಗೆ ಸಭೆಯ ಎರಡೂ ಕಡೆಯಿಂದ ವಿರೋಧವಿದೆ ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಮುಖ್ಯವಾಗಿ 3ನೇ ಕ್ಲಾಜಿನಲ್ಲಿ ಸೆಕ್ಷನ್ 36ನ್ನು ತಿದ್ದುಪಡಿ ಮಾಡಬೇಕೆಂದು ಇರತಕ್ಕಂಥಾದ್ದು ನಮ್ಮ ಹಕ್ಕು ಬಾಧ್ಯತೆಗಳನ್ನು ಕಳೆದುಕೊಳ್ಳಬೇಕಾಗಿದೆ. ಕರ ಹೇರಿದ ಮೇಲೆ ಅದರಲ್ಲಿಯ ದೋಷಗಳನ್ನು ಸರಿಪಡಿಸಿಕೊಳ್ಳಲು ನ್ಯಾಯವಾದ ಎಲ್ಲ ಮಾರ್ಗಗಳು ಮುಗಿದ ಮೇಲೆ ಕೋರ್ಟಿನಲ್ಲಿ ಅಪೀಲು ಮುಖಾಂತರ ನ್ಯಾಯ ಪಡೆಯತಕ್ಕಂಥ ಹಕ್ಕನ್ನು ಕಸಿದುಕೊಂಡಂತಾಗಿದೆ. ಇಲ್ಲಿಯವರೆಗೆ ಸರಕಾರದ ಹುಚ್ಚಾಬಟ್ಟೆ ಕಾರಭಾರದ ವಿಚಾರದಲ್ಲಿ ಹೈಕೋರ್ಟಿನ ಅನೇಕ ಕೇಸುಗಳಲ್ಲಿ ನಮಗೆ ಪರಿಹಾರ ದೊರೆತಿದೆ. ಹೈಕೋರ್ಟು ಇರುವುದರಿಂದ ಜನರಿಗೆ ಒಂದು ರೀತಿ ಸ್ವಾತಂತ್ರ್ಯವಿದೆ. ನಮ್ಮ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಆದರೆ ಈ ಹಕ್ಕು ಬಾಧ್ಯತೆಗಳನ್ನು ಮೊಟಕು ಮಾಡಲಾಗುತ್ತಿದೆ. ಅದರಲ್ಲಿಯೂ ಬಡ ವ್ಯವಸಾಯಗಾರರಿಗೆ ಬಹಳ ಅನನುಕೂಲವಾಗುತ್ತದೆ. ಏಕೆಂದರೆ ದೊಡ್ಡ ದೊಡ್ಡ ಪ್ಲಾಂಟೇಷನ್ ಕಂಪನಿ ಮುಂತಾದುವುಗಳಲ್ಲಿ ಕ್ರಮಬದ್ಧವಾಗಿ ಲೆಕ್ಕ ಪತ್ರ ಇಡುತ್ತಾರೆ. ಅವರು ಲೆಕ್ಕಪತ್ರ ತೋರಿಸಬಹುದು. ಆದರೆ ಸಾಮಾನ್ಯವಾಗಿ ಬಡ ವ್ಯವಸಾಯಗಾರನು ಸರಿಯಾದ ಲೆಕ್ಕಪತ್ರಗಳನ್ನಿಡುವುದಿಲ್ಲ. ಇದರಿಂದ ಬಡಬಗ್ಗರಿಗೆ ತೊಂದರೆಯಾಗುತ್ತದೆ. 1957ರ ಹಿಂದಿನ ಲೆಕ್ಕ ಕೊಡು ಎಂದು ಕೇಳಿದರೆ ಬಡ ರೈತನು ಕೊಡುವುದು ಹೇಗೆ? ಲೆಕ್ಕ

ಬರೆಯುವ ಅಭ್ಯಾಸವಿಟ್ಟುಕೊಂಡಿರುವುದಿಲ್ಲ. ಆದ್ದರಿಂದ ಯಾವರೀತಿ ಲೆಕ್ಕ ತೋರಿಸಬೇಕು ? ತೆಂಗಿನ ತೋಟದಲ್ಲಿ ಸಸಿಗಳಿರುವಾಗಲೇ ಒಂದು ಮರಕ್ಕೆ 100 ಕಾಯಿ ಎಂದು ಲೆಕ್ಕ ಹಾಕಿ ಅಸೆಸ್‌ಮೆಂಟ್ ಮಾಡಿದರೆ ಅದು ಸರಿಯಾಗಲಾರದು. ಅನ್ಯಾಯವಾಗಿ ಅಸೆಸ್‌ಮೆಂಟ್ ವಸೂಲಿ ಮಾಡಿದ್ದರೂ ಸಹ ರೀಫಂಡ್ ಕೇಳಬಾರದು ಎಂದರೆ ದೇಶದಲ್ಲಿ ಜನ ನೆಮ್ಮದಿಯಿಂದ ಬಾಳಬಹುದೇ ?

ಇನ್ನು "clause 5-Amendment of the Schedule,"ನಲ್ಲಿ "at least five members who are not less than 18 years of age," ಎಂದು ತಿದ್ದುಪಡಿ ಇದೆ. ಒಂದು ಕುಟುಂಬದಲ್ಲಿ ಹತ್ತು ಜನರ ಪಾಲು ಇರುತ್ತದೆ. ಅದರಲ್ಲಿ ನಾಲ್ಕು ಜನ ಮಾತ್ರ ದೊಡ್ಡವರು ಇದ್ದರೆ ಅದು ಲೆಕ್ಕಕ್ಕೆ ಬರುವುದಿಲ್ಲ. ಐದು ಜನ ಮತ್ತು 18 ವರ್ಷ ವಯಸ್ಸು ಎಂದು ಮಿತಿ ಹಾಕಿರುವುದು ಸರಿಯಾಗಿಲ್ಲ. ಸಾಧಾರಣವಾಗಿ ಎಲ್ಲ ಸದಸ್ಯರು ಈ ಅಂಶವನ್ನು ವಿರೋಧಿಸಿ ಮಾತನಾಡಿದ್ದಾರೆ. ಇಂಥ ಕಾನೂನು ಮಾಡುವುದರಿಂದ ಜನಗಳಿಗೆ ಹಿಂಸೆಯಾಗುತ್ತದೆ. ಜನಗಳಿಗೆ ಈ ರೀತಿ ತೊಂದರೆ ಕೊಡುವುದು ಸರಿಯಲ್ಲ. ಬಡ ರೈತರಿಗೆ ಆಗಬಹುದಾದ ಇಂಥ ತೊಂದರೆಗಳನ್ನು ತಪ್ಪಿಸಬೇಕು.

5-00 P.M.

ಇನ್ನು ಕ್ಲಾಜು 55ರ ವಿಷಯ. ಇದು ಹೈಕೋರ್ಟಿಗೆ ಸಂಬಂಧಪಟ್ಟಿದ್ದರೂ ಇದರಲ್ಲಿ ಅಪ್ಲೈ ಆಗಕೂಡದು ಎಂದು ಒಂದು ಪ್ರಾವಿಸೊ ಇದೆ. ಅದು ತುಂಬಾ ಅನ್ಯಾಯ. ಆದರ ತೀರ್ಮಾನ ಲೆಕ್ಕಕ್ಕೆ ತೆಗೆದುಕೊಳ್ಳಬೇಡಿ ಎಂದು ಹೇಳಿದರೆ ಹೇಗೆ ? ಅದು ಅಷ್ಟೇ ಅಲ್ಲ. ಷೆಡ್ಯೂಲಿನಲ್ಲಿರತಕ್ಕ ರೀತಿಯಲ್ಲಿ ಈಗಾಗಲೇ ಹೇಳಿರುವಂತೆ 5ನೇ ತಿದ್ದುಪಡಿ ಪ್ರಕಾರ 18 ವರ್ಷ ವಯಸ್ಸಾಗಿರುವವರು ಐದು ಜನ ಇರಬೇಕು ಎಂದು ಹೇಳಿದರೆ ಒಪ್ಪತಕ್ಕದ್ದಲ್ಲ. ಮುಖ್ಯವಾಗಿ ವ್ಯವಸಾಯದಲ್ಲಿ ಸಹಕಾರ ಬಹಳ ಅಗತ್ಯ. ವ್ಯವಸಾಯಕ್ಕೆ ಮೊದಲಿನಿಂದಲೂ ಮಾಮೂಲಾಗಿ ಒಟ್ಟು ಕುಟುಂಬ ಬಹಳ ಸಹಕಾರಿಯಾಗಿ ಬಂದಿದೆ. ಅದನ್ನು ಈಗ ಒಡೆಯುವುದಕ್ಕೆ ಸಹಾಯ ಮಾಡುತ್ತೀರಿ. ಆದ್ದರಿಂದ ಇದನ್ನು ನಾನು ವಿರೋಧಿಸುತ್ತೇನೆ.

ಇನ್ನು ಕ್ಲಾಜು ೬೯ರ ಪ್ರಕಾರ ರಿಪೀಲ್ ಆಗಿದೆ. ಕಾಯಿದೆಯಲ್ಲಿ ರಿಪೀಲ್ ಆಗಿರತಕ್ಕ ರೀತಿಯಲ್ಲಿ ಯಾವುದಾದರೂ ಆಗಿದ್ದರೆ, ಅದೇರೀತಿ ನೀವು ಕೃಪು ತೆಗೆದುಕೊಳ್ಳುತ್ತೇವೆಂದು ಹೇಳುವುದಾದರೆ, ಅದು ಶುದ್ಧ ನಾಚಿಕೆ ಗೇಡು. ಏಕೆಂದರೆ ಈ ಶಾಸನ ಸಭೆಯಲ್ಲಿ ರಿಪೀಲ್ ಮಾಡಬೇಕಾದರೆ ಅದರ ಅವಶ್ಯಕತೆ ಇಲ್ಲ. ಬೇಡವೆಂದು ಹೇಳಿದ್ದರ ಮೇಲೆ ರಿಪೀಲ್ ಮಾಡಿರುವುದು ಸರಿಯಲ್ಲ. ಅಂತಹ ಆಕ್ಟಿನಿಂದ ಇವೊತ್ತಿನ ದಿವಸ ಅಸೆಸ್ ಮಾಡುವುದು, ಮತ್ತೆ ಅದನ್ನು ಜಾರಿಗೆ ಕೊಡಬೇಕಾದರೆ ಕೋರ್ಟಿನ ತೀರ್ಮಾನವನ್ನು ಗಣನೆಗೆ ತೆಗೆದುಕೊಳ್ಳಬಾರದು ಎಂದು ಹೇಳಿದರೆ ಖಂಡಿತವಾಗಿ ಜನಗಳಿಗೆ ಬಹಳ ಮಟ್ಟಿನ ತೊಂದರೆಯನ್ನುಂಟುಮಾಡಿ ಅವರಿಗೆ ಇರತಕ್ಕ ನ್ಯಾಯವಾದ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ತರುವುದಾಗಿದೆ. ಆದ್ದರಿಂದ ಇದರಲ್ಲಿರತಕ್ಕ ಪ್ರತಿಯೊಂದು ತಿದ್ದುಪಡಿಯನ್ನೂ ನಾನು ವಿರೋಧಿಸುತ್ತೇನೆ. ಅದೂ ಅಲ್ಲದೆ ಈ ಮಸೂದೆ ಸರ್ಕಾರದವರು ಖಂಡಿತವಾಗಿ ಸೆಲೆಕ್ಟ್ ಕಮಿಟಿಗೂ ಕೂಡ ಕಳುಹಿಸುವಷ್ಟು ಲಾಯಕ್ಕಿಲ್ಲವೆಂದು ಹೇಳಿ ಇದನ್ನು ಸರ್ಕಾರದವರು ಕೂಡಲೆ ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ನಾನು ಈ ತಿದ್ದುಪಡಿಯನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

†Sri D. PARAMESWARAPPA (Honnali).—Sir, I believe that most of the Hon'ble Members of this House come from agriculturists' families and know the difficulties of agriculturists. At a time when conditions of the agriculturists in the country who form nearly 70 per cent of the total population are very deplorable and at a time when there is a cry that there is already the burden of taxation and it is heavy on the common man, this sort of a legislation is sought to be introduced by the Finance Minister of this State. Yesterday, while the Sales-tax amending Bill was being discussed, many of the Members expressed their views and it was finally accepted that, for various reasons, the Bill should be referred to a Select Committee for careful consideration. To-day also many of the Members of the House who come from the agriculturist family and many Members who have studied the legal position of the problem, have expressed their views that this sort of legislation at this juncture is unwarranted and that the Finance Minister may withdraw it or at best the Bill should be referred to a Select Committee. That is the view expressed by many of the Members in this House.

On a perusal of amendment of section 2, as pointed out by the previous Finance Deputy Minister and also by other Members of this House, it could be seen that this would affect the rights and privileges that accrued to such of the persons who were not affected by this Act which was in force in the old Mysore State, *i. e.*, before 1-11-1956, Reorganisation of States. Referring to the amendment many of my friends have already stated that it is repugnant to the policy of Government in so far as co-operative farming is concerned and it hits the undivided joint hindu families. I think the views expressed by Hon'ble Members are sound and for these reasons, these amendments are not at all necessary.

Regarding the amendment to section 36 and the reasons that have been given in this Bill for the validation clearly shows that it is a very great

(SRI D. PARAMESWARAPPA)

and ingenious attempt on the part of the Finance Minister to make a sort of legislation which is intended to over-ride the judiciary. We have accepted the principle that after the separation of Judiciary from the Executive that the rights and liberties of individuals are very well safeguarded by the Legislature and if we look to the amendments that are now sought to be made, it is obvious that there is an attempt on the part of the Government to make the Executive more powerful by over-riding the judiciary, in our State. We are living in days of democracy and if we accept such amendments, there would be no safeguard for the individual rights.

[Sri V. MASIYAPPA (Chairman) in the Chair]

Before introducing this sort of legislation, the Finance Minister ought to have thought very coolly whether the introduction of this legislation would not offend the provisions of any other Act or how it would affect the agriculturists in the country. He has not taken all this into consideration. Therefore, the objection with which this piece of legislation is brought is not clearly mentioned in the Statement of Objects and Reasons and the only reason that is given is, in the light of certain decisions of the Mysore High Court, it is considered to amend the sections 2(1) (v), 36 and 69 of the Mysore Agricultural Income-Tax Act, 1957.

So, this is the only reason that he has given for bringing these amendments. Therefore, my submission is that if these amendments are introduced, certainly there will be great scope for the assessing authorities to play havoc and to pass capricious and arbitrary orders which will harass the poor agriculturists. As you are aware, it is not possible, keeping in view the educational standards of agriculturists, to maintain accounts and if on the ground that he has not maintained accounts, the assessing authority is going to assess capriciously or arbitrarily, this House can very well imagine the havoc that will be caused to him by the assessing officers. Therefore in order to avoid such harassment, this piece of legislation should not be encouraged and I request the Hon'ble Finance Minister to withdraw this Bill. If he is not inclined to do so, this legislation may be discussed in all its details and various implications may be discussed at length. I therefore suggest that the Finance Minister may be pleased to withdraw this Bill for the reasons I have already said.

[MR. DEPUTY SPEAKER in the Chair.]

‡ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ನಮ್ಮ ಮುಂದೆ ಇಟ್ಟಿರುವ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್‌ನ್ನು ನೋಡಿದರೆ ನಿಜವಾಗಿಯೂ ರೈತರ ಹಿತರಕ್ಷಣೆ ಮಾಡುವುದಕ್ಕೆ ಸರ್ಕಾರದವರಿಗೆ ಮನಸ್ಸು ಇದೆಯೋ ಎಂದು ಅನುಮಾನವುಂಟಾಗುತ್ತದೆ. ಈಗಾಗಲೇ ಮೊನ್ನೆತಾನೆ ಒಂದು ರೂಪಾಯಿಗೆ 15 ನಯೇ ಪೈಸೆಗಳನಂತೆ ಸರ್ ಚಾರ್ಜು ವಸೂಲು ಮಾಡುತ್ತಾ ಇದ್ದೀರಿ. ಮರುಕ್ಷಣದಲ್ಲೇ ಈ ಒಂದು ತಿದ್ದುಪಡಿ ಕಾನೂನನ್ನು ತಂದು ರೈತರಿಗೆ ತೊಂದರೆ ಕೊಟ್ಟಿರೆ, ನಿಜವಾಗಿಯೂ ರೈತರ ಸ್ಥಿತಿ ಏನಾಗಿದೆ ಎಂಬುದನ್ನು ನಾವೆಲ್ಲರೂ ತಿಳಿದು ಕೊಂಡಿದ್ದೇವೆ, ಅವರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಮತ್ತಷ್ಟು ಚಿಂತಾಜನಕವಾಗುತ್ತದೆ. 5 ಜನರ ಒಂದು ಅವಿಭಕ್ತ ಕುಟುಂಬ ಎಂದು ಹೇಳುತ್ತೀರಿ. ಈ ಮಸೂದೆ ಬಂದಮೇಲೆ ಪ್ರತಿಯೊಂದು ಅವಿಭಕ್ತ ಕುಟುಂಬವೂ ಕೂಡ ವಿಭಕ್ತವಾಗಿ ಹೊರಟು ಹೋಗಿದೆ. 5 ಜನರ ಕುಟುಂಬ ಎಂದರೆ 18 ವರ್ಷಕ್ಕೆ ಮೇಲ್ಪಟ್ಟು ಇರುವವರ ಒಂದು ಕುಟುಂಬ. ಒಂದು ವರ್ಷದಿಂದ 18 ವರ್ಷದವರೆಗೆ ಮಗುವನ್ನು ಸಾಕಬೇಕಾದರೆ ಎಷ್ಟು ಕಷ್ಟ, ಎಷ್ಟು ಖರ್ಚು, ವಿದ್ಯಾಭ್ಯಾಸದ ಗತಿಯೇನು ಎಂಬುದನ್ನು ಯೋಚನೆ ಮಾಡಿದರೆ ಈ ಬಿಲ್‌ನ್ನು ಹೇಗೆ ಡ್ರ್ಯಾಫ್ಟ್ ಮಾಡಿದರು ಎಂದು ಆಶ್ಚರ್ಯವಾಗುತ್ತದೆ. ಹಳ್ಳಿಯಲ್ಲಿ ಸ್ಕೂಲ್ ಕಟ್ಟಡ ಆಗಬೇಕಾದರೆ, ರಸ್ತೆ ಆಗಬೇಕಾದರೆ, ಬಾವಿ ತೆಗೆಯಬೇಕಾದರೆ ಯಾವುದಕ್ಕೆ ಆದರೂ ಸೇಕಡ 50 ಕಂಟ್ರಿಬ್ಯೂಷನ್ ಹಳ್ಳಿಯವರು ಕೊಡಬೇಕೆಂದು ಹೇಳುತ್ತೀರಿ. ಹೀಗೆ ನಾನಾವಿಧವಾದ ತೊಂದರೆಗಳನ್ನು ರೈತರ ಮೇಲೆ ಹಾಕುತ್ತಾ ಇದ್ದೀರಿ. ಅಷ್ಟೇ ಸಾಲದು ಎಂದು ಹೇಳಿ ಈ ಬಿಲ್ಲನ್ನು ತಿದ್ದುಪಡಿಮಾಡಿ 1957ರಿಂದ ತೆರಿಗೆ ವಸೂಲು ಮಾಡಬೇಕೆಂದು ಪ್ರಯತ್ನ ಮಾಡಿರುವುದನ್ನು ನೋಡಿದರೆ ನಿಜವಾಗಿಯೂ ರೈತ ಇರಬೇಕೇ ? ಅವನ ಪರಿಸ್ಥಿತಿ ಏನು ಎಂಬುದನ್ನು ರೈತರ ಪ್ರತಿನಿಧಿಗಳಾದ ತಾವು ತಿಳಿದುಕೊಂಡಿಲ್ಲ ಎಂದು ಅನುಮಾನ ವುಂಟಾಗಿದೆ. ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಿಲ್ ಬಂದಮೇಲೆ ಲೆಕ್ಕಪತ್ರ ಕೊಡಬೇಕಾದರೆ, ಸಾವಿರ, ಎರಡು ಸಾವಿರ ರೂಪಾಯಿ ಕಂದಾಯ ಕೊಡಬೇಕಾಗಿ ಒಂದು ಲೆಕ್ಕಪತ್ರ ಬರೆಯುವುದಕ್ಕೂ ತಜ್ಞರ ಮನೆಬಾಗಿಲಿಗೆ ಎಷ್ಟುಸಾರಿ ತಿರುಗುತ್ತಿದ್ದಾನೆ ಎಂಬುದನ್ನು ಅನೇಕರು ನೋಡಿರಬಹುದು. ನಾನು ಅದನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ. ರೈತರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಈ ತಿದ್ದುಪಡಿ ಮಸೂ

ದೆಯ ಮೂಲಕ ಅಧಿಕಾರಿಗಳ ಕೈಗೆ ರೈತರನ್ನು ಸಿಕ್ಕಿಸುವ ಪರಿಪಾಠ ಮಾಡಬಾರದು ; ಸೂಕ್ತವಾದ ರೀತಿಯಲ್ಲಿ ತಿದ್ದುಪಡಿ ಮಾಡಿ ಅಥವಾ ಇದನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಸರ್ಕಾರದವರಿಗೆ ಈ ಸಂದರ್ಭದಲ್ಲಿ ತಿಳಿಸುತ್ತೇನೆ.

Sri V. M. DEO (Gubbi).—Mr. Speaker, Sir, I oppose this Bill on four counts ; firstly agriculture is the least paying in the world particularly in an under-developed economy; secondly, the nature of developing economy is that the funds accruing to the Government go on decreasing from year to year. This is the case with the budget of all the advanced countries in the world. Thirdly, rarely you will come across a joint family in which five members have attained majority and still be with the joint family. There will be usually one or two people who will be earning members and others who have not attained majority and will solely depend on them. Usually, if there are more than two people who have already attained majority and become earning members, they will automatically go out of that joint family. Therefore, if this amendment is brought into force, the idea of giving a concession will lose all its meaning. Then in putting this amendment, the amount that will actually accrue to the Government by bringing this amendment into force has not been considered. Before you come to a decision in the interest of the people, generally we will have to consider all the aspects of a particular question. We all know that the decisive factor in all these things will be the financial aspect of it. It is already known to this House that the Government do not have any figures in this matter. I feel that the financial aspect deciding in whether an amendment of this type should be brought forward or not has not been considered at all. In short, in a very backward country, there is no other major source of income and so the farmer had to bear the burden of the First Five-year Plan. Even today 75 per cent of the population belongs to agricultural class and so it was the farmers who financed a big slice of the First Five-Year Plan. So also the Second Five-Year Plan. You look at America and England. They have given subsidies for fertilisers and to export grains. In other words, to develop economy what should be the attitude ? This sort of taxation should go. Instead, the Government should be permeated with the idea of alleviating the sufferings that the farmers are undergoing. In view of all these things the very idea of agricultural income-tax loses all its meaning. Under the circumstances, I request the Hon'ble Chief Minister to refer this Bill to a Select Committee to explore the possibility of abolishing this taxation altogether excepting possibly, for plantation crops.

‡ಶ್ರೀ ಜೆ. ದೇವಯ್ಯ (ಮಂಡ್ಯ).—ಸ್ವಾಮಿ, ಈ ವ್ಯವಸಾಯ ವರಮಾನದ ತೆರಿಗೆಯ ಮಸೂದೆಯನ್ನು ಇಂಗ್ಲಿಷಿನಲ್ಲಿ ತಯಾರುಮಾಡಿದ್ದಾರೆ ಇದು ವ್ಯವಸಾಯಗಾರರಿಗೆ ಸಂಬಂಧಪಟ್ಟದ್ದು. ವ್ಯವಸಾಯಗಾರರು ಬರಿಯ ಕನ್ನಡ ಓದಿರುವವರು. ಆದರೂ ಈ ಮಸೂದೆ ಇಂಗ್ಲಿಷಿನಲ್ಲಿದೆ. ಇದು ಸರಿಯಲ್ಲ, ಕನ್ನಡದಲ್ಲಿ ಮುದ್ರಣವಾಗಬೇಕು. ವ್ಯವಸಾಯ ಮಾಡವವರೆಲ್ಲರೂ ಕನ್ನಡವನ್ನು ಮಾತ್ರ ಕಲಿತು, ಕಷ್ಟಪಟ್ಟು ಕೆಲಸಮಾಡಿ ಧಾನ್ಯ ಬೆಳೆಯುವವರು. ಇಂಥವರು ಈ ಮಸೂದೆಯಲ್ಲಿರುವ ವಿಷಯವನ್ನು ತಿಳಿದುಕೊಂಡು ಮಾತನಾಡಲು ಅವಕಾಶಮಾಡಿಕೊಡಲು ಇದನ್ನು ಕನ್ನಡದಲ್ಲಿ ಮುದ್ರಿಸಬೇಕೆಂದು ಕೇಳುತ್ತೇನೆ.

ಸ್ವಾಮಿ, ಇದು ಬಹು ಪ್ರಾಮುಖ್ಯವಾದ ಮಸೂದೆ. ರೈತಾಪಿ ಜನರ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಇದರಲ್ಲಿರುವ ವಿಧಿಗಳನ್ನು ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಐದು ವರ್ಷಗಳ ಲೆಕ್ಕಪತ್ರಗಳನ್ನು ಕೊಡಬೇಕಾದರೆ ಹಳ್ಳಿಯ ರೈತರಿಗೆ ಬಹಳ ಕಷ್ಟ. ಏಕೆಂದರೆ, ಅವರು ವಿದ್ಯಾವಂತರಾಗಿಲ್ಲ. ಈ ವಿಷಯವನ್ನು ಇಲ್ಲಿರುವ ಅನೇಕ ಸ್ನೇಹಿತರು ಬಲ್ಲರು. ಒಂದು ವರ್ಷಕ್ಕೆ ಒಂದೆ ಕರೆಯಲ್ಲಿ ಬೆಳೆಯಾಗಬೇಕಾದರೆ ಎಷ್ಟು ಖರ್ಚಾಗುತ್ತದೆ. ಎಷ್ಟು ಬೆಳೆಯಾಗುತ್ತದೆ ಎನ್ನುವುದರ ಬಗ್ಗೆ ವ್ಯವಸಾಯ ಇಲಾಖೆಯವರ ಮೂಲಕ ಲೆಕ್ಕಗಳನ್ನು ತರಿಸಬೇಕಾಗುತ್ತದೆ. ವ್ಯವಸಾಯ ಕೂಲಿಗಾರರು ಯಾವ ಸ್ಥಿತಿಯಲ್ಲಿದ್ದಾರೆ, ಅವರಿಗೆ ಎಷ್ಟು ಕೂಲಿ ಸಿಕ್ಕುತ್ತಿದೆ, ವ್ಯವಸಾಯಗಾರರು ಹಳ್ಳಿಗಳಲ್ಲಿ ಎಷ್ಟು ಮಟ್ಟಿಗೆ ಸಂತೋಷವಾಗಿದ್ದಾರೆ, ಎಷ್ಟುಮಟ್ಟಿನ ಸೌಲಭ್ಯಗಳನ್ನನುಭವಿಸುತ್ತಿದ್ದಾರೆ, ಎಂಥ ಉಡುಪನ್ನುಪಯೋಗಿಸುತ್ತಾರೆ, ಎಂಥ ಮನೆಗಳಲ್ಲಿ ವಾಸಮಾಡುತ್ತಾರೆ; ಕಾರುಗಳಲ್ಲಿ ಓಡಾಡುತ್ತಾರೆಯೇ ಇತ್ಯಾದಿ ವಿಷಯಗಳನ್ನು ಪ್ರಜಾಪ್ರತಿನಿಧಿಗಳಾದ ಮಂತ್ರಿಗಳು ಚೆನ್ನಾಗಿ ಬಲ್ಲರು. ಇಂಥ ಕಾನೂನುಗಳನ್ನು ಜಾರಿಗೆ ತರುವದರಿಂದ ಅಧಿಕಾರವರ್ಗದವರ ಕೈಕೆಳಗೆ ರೈತರು ಬಾಳುವುದಕ್ಕವಕಾಶವಾಗುತ್ತದೆ. ಹಳ್ಳಿಗಳವರು ಕೆಲವರು ವಿದ್ಯಾವಂತರಾದವರು ಹಳ್ಳಿಗಳಲ್ಲಿ ವಾಸಮಾಡುತ್ತಿಲ್ಲ. ಒಳ್ಳೆಯ ಕೆಲಸಗಳಿಗೆ ಪಟ್ಟಣಗಳಿಗೆ ಬರುತ್ತಾರೆ. ಹೀಗಿರುವಾಗ, ಹಳ್ಳಿಯ ರೈತರು ಹೇಗೆ ಲೆಕ್ಕಗಳನ್ನಿಡುತ್ತಾರೆಂಬುದನ್ನು ಯೋಚನೆ ಮಾಡಬೇಕು. ಐದು ಜನರಿಗಿಂತ ಕಡಮೆ ಒಂದು ಸಂಸಾರದಲ್ಲಿದ್ದರೆ ಮೂರೂವರೆ ಸಾವಿರ ಅದಕ್ಕೆ ಮೇಲ್ಪಟ್ಟು ಜನರಿದ್ದರೆ ಏಳು ಸಾವಿರ ಎಂದು ನಮೂದಿಸಿದ್ದಾರೆ. ಒಂದು ಸಂಸಾರದಲ್ಲಿ ಐದು ಜನರಿದ್ದು ಒಬ್ಬೊಬ್ಬರಿಗೂ ಐದಾರು ಜನ ಮಕ್ಕಳಿದ್ದರೆ ಒಟ್ಟು

(ಶ್ರೀ ಜೆ. ದೇವಯ್ಯ)

ಕುಟುಂಬದಲ್ಲಿ ಮೂವತ್ತು ಜನರಾಗುತ್ತಾರೆ. ಈಗ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಒಂದೊಂದು ಸಂಸಾರದಲ್ಲಿ ಹದಿನೈದುಇಪ್ಪತ್ತು ಜನ ಮಕ್ಕಳಿರುತ್ತಾರೆ. ಅವರಿಗೆಲ್ಲ ಯಾವ ರೀತಿ ವಿದ್ಯಾಭ್ಯಾಸ ಕೊಡಿಸಬೇಕು, ಮಿಕ್ಕ ಸೌಲಭ್ಯಗಳನ್ನೊದಗಿಸಬೇಕು ಎಂಬುದನ್ನು ಯೋಚನೆ ಮಾಡಬೇಕು. ಪಟ್ಟಣಗಳಲ್ಲಿರುವವರು ಎಷ್ಟೋ ಚೆನ್ನಾಗಿದ್ದಾರೆ. ಇವರಲ್ಲಿ ಗಂಡಸರು ಯಾವ ರೀತಿಯ ಬಟ್ಟೆಗಳನ್ನು ಹಾಕಿಕೊಳ್ಳುತ್ತಾರೆ, ಹೆಂಗಸರು ಎಂಥ ಸೀರೆಗಳನ್ನುಡುತ್ತಾರೆ, ಹಳ್ಳಿಗಳಲ್ಲಿರುವವರು ಎಂಥ ಉಡುಪುಗಳನ್ನು ಧರಿಸುತ್ತಾರೆ ಎಂಬುದನ್ನು ಹೋಲಿಸಿ ನೋಡಬೇಕು. ಹಿಂದೆ ಹಳ್ಳಿಗಳವರಿಗೆ ಮಗ್ಗದ ಬಿಳಿಸೀರೆ ಮತ್ತು ಪಂಚೆಗಳು ಅಗ್ಗವಾಗಿ ಸಿಕ್ಕುತ್ತಿದ್ದಾಗ ಸುಖವಾಗಿದ್ದರು. ಈಗ ಕಷ್ಟದಲ್ಲಿದ್ದಾರೆ. ಬಟ್ಟೆಗಳ ಬೆಲೆಗಳು ಏರಿವೆ. ಹೀಗೆ ರೈತರಿಗೆ ಇನ್ನೂ ಅನೇಕ ತೊಂದರೆಗಳಿವೆ. ಇದೆಲ್ಲವನ್ನೂ ಗಮನಿಸಿ, ಈ ಮಸೂದೆಯನ್ನು ಸರಿಯಾಗಿ ಪರಿಶೀಲಿಸಲು ಇದನ್ನು ಸೆಲೆಕ್ಟ್ ಕಮಿಟಿಗೆ ಹಾಕಲಿ, ಇಲ್ಲದಿದ್ದರೆ ವಾಪಸು ತೆಗೆದುಕೊಳ್ಳಲಿ. ಸೆಲೆಕ್ಟ್ ಕಮಿಟಿ ರಚನೆ ಮಾಡುವಾಗ ವ್ಯವಸಾಯದಿಂದ ಜೀವನ ಮಾಡುವವರೂ ವ್ಯವಸಾಯದಲ್ಲಿ ಅನುಭವವುಳ್ಳವರೂ ಆದವರನ್ನು ಸದಸ್ಯರಾಗಿ ಆ ಸಮಿತಿಗೆ ಹಾಕಿ, ಅವರಿಂದ ಪರಿಶೀಲನೆ ಮಾಡಿಸಿ ಆ ಮೇಲೆ ಈ ಸಭೆಯ ಮುಂದೆ ತರಬೇಕು, ಇಲ್ಲದಿದ್ದರೆ ರೈತರ ಹೊರೆ ಹೆಚ್ಚಾಗುತ್ತದೆ. ಮುಂದೆ ಯಾವ ರೀತಿ ಈ ತೆರಿಗೆ ಹಾಕಬೇಕು, ಎಷ್ಟು ಉತ್ಪತ್ತಿಯಿದ್ದರೆ ಹಾಕಬೇಕೆಂಬುದನ್ನು ಯೋಚಿಸಿ ತರಬಹುದು. ಈಗ ಇದನ್ನು ವಾಪಸು ತೆಗೆದುಕೊಳ್ಳುವುದು ಉತ್ತಮವೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಈ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತಾ ಇದರಲ್ಲಿರುವ ಒಂದೆರಡು ಮುಖ್ಯವಾದ ಅಂಶಗಳ ಬಗ್ಗೆ ಕೆಲವು ವಿಚಾರಗಳನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಹಿಂದೂ ಅವಿಭಕ್ತ ಕುಟುಂಬ ಅಥವಾ ಒಟ್ಟು ಕುಟುಂಬ ಎಂಬುದರ ಬಗ್ಗೆ ತಿದ್ದುಪಡಿ ಮಾಡಬೇಕೆಂದು ಸರ್ಕಾರದವರು ಬಯಸಿರುವುದು ಅಷ್ಟು ಸೂಕ್ತವಲ್ಲವೆಂದು ನಾನು ಹೇಳುತ್ತೇನೆ. ಸಾಧಾರಣವಾಗಿ ತೆರಿಗೆ ಕೊಡುವುದರ ಬಗ್ಗೆ ಮಾತನಾಡಬೇಕಾದರೆ, ರೈತನಾಗಲೀ ಅಥವಾ ಬೇರೆ ಯಾವ ಪ್ರಜೆಯಾಗಲೀ ಸರ್ಕಾರದಿಂದ ಪ್ರತಿಫಲವನ್ನು ಪಡೆಯಬೇಕಾದರೆ ಅದಕ್ಕೆ ತಕ್ಕಷ್ಟು ಜವಾಬ್ದಾರಿಯನ್ನು ಹೊರಬೇಕೆಂಬ ತತ್ವವನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಆ ಪ್ರತಿಫಲಕ್ಕೆ ಮೀರಿದಷ್ಟು ಅಥವಾ ತನ್ನ ವರಮಾನದ ದೃಷ್ಟಿಯಿಂದ ಇರುವ ಶಕ್ತಿಗೆ ಮೀರಿ ತೆರಿಗೆ ಹಾಕಿದಾಗ ಅಥವಾ ಹೆಚ್ಚಿನ ತೆರಿಗೆ ಕೊಡಬೇಕಾದಾಗ ಅಥವಾ ಬೇರೆ ಕೆಲಸ ಮಾಡುವವರಿಗೆ ತೆರಿಗೆ ಕೊಡಲು ಶಕ್ತಿಯಿರುವವರಿಗೆ ವಿನಾಯಿತಿ ಸಿಕ್ಕಿ ಕಡಮೆ ವರಮಾನವಿರುವವರು ಹೆಚ್ಚು ತೆರಿಗೆ ಕೊಡಬೇಕಾಗಿ ಬಂದಾಗ ಅನ್ಯಾಯವೆಂಬುದು ಎದ್ದು ಕಾಣುತ್ತದೆ. ಈ ರೀತಿ ಅನ್ಯಾಯ ನಡೆಯತಕ್ಕ ಕಾಲದಲ್ಲಿ ಈ ಏಟಿಗೆ ಗುರಿಯಾಗತಕ್ಕವರು ಮತ್ತು ಅವರಿಗೆ ಸ್ವಲ್ಪ ಸಂಬಂಧಪಟ್ಟವರು ಈ ದೋಷವನ್ನು ತೋರಿಸಿ ಕಾನೂನನ್ನು ಸರಿಯಾಗಿ ಮಾಡಿ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಈ ದೃಷ್ಟಿಯಿಂದ ಶ್ರೀಮತಿ ಸುಬ್ಬಮ್ಮನವರು ಹೇಳಿದ ಹಾಗೆ, ರೈತವರ್ಗದವರಿಗೆ ಬರುವ ವರಮಾನವನ್ನೂ ಅವರು ಪಡೆಯತಕ್ಕ ಪ್ರತಿಫಲವನ್ನೂ ಬೇರೆ ಕೆಲಸ ಮಾಡುವವರ ವರಮಾನ ಮತ್ತು ಅವರು ಸರ್ಕಾರದಿಂದ ಪಡೆಯತಕ್ಕ ಪ್ರತಿಫಲಗಳೊಡನೆ ಹೋಲಿಸಿದಾಗ, ರೈತವರ್ಗದವರು ಪಡೆಯತಕ್ಕ ಪ್ರತಿಫಲ ಕಡಮೆ. ಮತ್ತು ಅವರ ಮೇಲೆ ಬಿದ್ದಿರುವ ತೆರಿಗೆಯ ಹೊರೆ ಹೆಚ್ಚು ಎಂಬ ಭಾವನೆ ಬರುತ್ತದೆ. ಹದಿನೆಂಟು ವರ್ಷ ವಯಸ್ಸು ಮೀರಿದವರನ್ನು ಮಾತ್ರ ಅವಿಭಕ್ತ ಕುಟುಂಬದ ಲೆಕ್ಕಕ್ಕೆ ಸೇರಿಸಬೇಕೆಂಬ ತಿದ್ದುಪಡಿ ಏಕೆ ಬಂತು ಎನ್ನುವುದು ಈ ಮಸೂದೆಯ Statement of Objects and Reasons ನನಗೆ ಅರ್ಥವಾಗಲಿಲ್ಲ. ಹೈಕೋರ್ಟು ಮತ್ತು ಸುಪ್ರೀಮ್ ಕೋರ್ಟು ಕೊಟ್ಟಿರುವ ತೀರ್ಮಾನಗಳ ದೃಷ್ಟಿಯಿಂದ ಕೆಲವು ತಿದ್ದುಪಡಿಗಳಾಗಬೇಕೆಂದು ಕಂಡುಬಂದಿರ ಬಹುದು. ಆದರೆ ಇದು ಎಷ್ಟುಮಟ್ಟಿಗೆ ಅವಶ್ಯಕವಾದ ತಿದ್ದುಪಡಿ ಎಂಬುದನ್ನು ನಾವು ವಿಮರ್ಶೆ ಮಾಡಬೇಕು. ಒಟ್ಟು ಕುಟುಂಬ ಅಥವಾ ಅವಿಭಕ್ತ ಕುಟುಂಬ ಎನ್ನುವುದರ ವಿಚಾರದಲ್ಲಿ ಹೈಕೋರ್ಟ್ ಅಥವಾ ಸುಪ್ರೀಮ್ ಕೋರ್ಟ್ ತೀರ್ಮಾನವೇನಾದರೂ ಆಗಿದೆಯೆ ಎನ್ನುವುದು ಈ Statement of Objects and Reasons ನಿಂದ ಕಂಡುಬರುವುದಿಲ್ಲ.

ಎರಡನೆಯದಾಗಿ, ಅನೇಕ ವರ್ಷಗಳಿಂದ ಜಾರಿಯಲ್ಲಿರುವ ಇಂಡಿಯನ್ ಇನ್‌ಕಮ್‌ಟ್ಯಾಕ್ಸ್ ಕಾನೂನಿನಲ್ಲಿ ಅವಿಭಕ್ತ ಕುಟುಂಬಕ್ಕೆ ಈ ರೀತಿಯ ವಿವರಣೆಯಿಲ್ಲ, ಬೇರೆ ರೀತಿ ಇದೆ. ಹೀಗಿರುವಾಗ ವ್ಯವಸಾಯಗಾರರಿಗೆ ಸಂಬಂಧಪಟ್ಟ ಈ ಕಾನೂನಿನಲ್ಲಿ ಈ ರೀತಿ ತಿದ್ದುಪಡಿ ಮಾಡುವ ಅವಶ್ಯಕತೆಯಿದೆಯೇ; ಇದರ ಉದ್ದೇಶವೇನು ಎಂಬುದು ಅರ್ಥವಾಗಲಿಲ್ಲ. ಹಾಗೆಯೇ ಯೋಚನೆ ಮಾಡಿದ್ದರಲ್ಲಿ ನಾನು ಅರ್ಥಮಾಡಿಕೊಂಡಿರುವುದು 18 ವರ್ಷಗಳಿಗೆ ಮೇಲ್ಪಟ್ಟಿರುವ ಸಂಸಾರದ ಸದಸ್ಯರು, ಒಟ್ಟು ಕುಟುಂಬದಲ್ಲಿರತಕ್ಕವರು ಆ ಕುಟುಂಬದ ವರಮಾನಕ್ಕೆ ಭಾಗಿಗಳಾಗಿರುತ್ತಾರೆ. They will contribute to the earnings of the family and therefore whatever excess earnings are there, they will be exempted from tax.

5-30 P.M.

ಈ ಭಾವನೆಯಿಂದ ಸೇರಿಸಿದ್ದಾರೆಯೋ ಅಥವಾ 18 ವರ್ಷಗಳಿಗಿಂತ ಕಡಮೆ ವಯಸ್ಸಿನವರು ಕುಟುಂಬದ ವರಮಾನಕ್ಕೆ ಭಾಗಿಗಳಾಗಿರುವುದಿಲ್ಲ ಎಂತಲೇ ಅಥವಾ ಒಟ್ಟು ಅವಿಭಕ್ತ ಕುಟುಂಬದ ಹೆಸರಿನಮೇಲೆ ಅನೇಕ ವಿನಾಯಿತಿಗಳನ್ನು ಪಡೆಯುತ್ತಿದ್ದಾರೆಂದೋ ಅಥವಾ ಸರ್ಕಾರಕ್ಕೆ ವರಮಾನ ಕಡಮೆಯಾಗಿದೆ, ಹೆಚ್ಚಿಸಬೇಕು, ತೆರಿಗೆಗೆ ಒಳಪಡುವವರ ಸಂಖ್ಯೆ ಹೆಚ್ಚಿಸಲು ಅವಕಾಶವಾಗಬೇಕು ಎಂಬ ಭಾವನೆಯಿಂದ ಈ ತಿದ್ದುಪಡಿ ಸೂಚಿಸಿದ್ದಾರೋ ನನಗೆ ಅರ್ಥವಾಗುವುದಿಲ್ಲ. ನ್ಯಾಯವಾಗಿ ವಿಮರ್ಶೆಮಾಡಿದರೆ ಹಿಂದೂ ಅವಿಭಕ್ತ ಕುಟುಂಬದಲ್ಲಿ ಏಳೆಂಟು ವರ್ಷಗಳಿಗೆ ಮೇಲ್ಪಟ್ಟಿರುವ ಪ್ರತಿಯೊಬ್ಬರೂ ಸಹ ವ್ಯವಸಾಯದಲ್ಲಿ ಭಾಗಿಯಾಗಿರುತ್ತಾರೆ ಎಂಬುದು ನಮ್ಮ ಅನುಭವ; ಪ್ರತಿಯೊಬ್ಬರಿಗೂ ವ್ಯವಸಾಯದ ವರಮಾನದಲ್ಲಿ ಭಾಗವಿದೆ. ಅಲ್ಲದೆ ಹಿಂದೂ ಕೋಡ್ ಪ್ರಕಾರ ಆಸ್ತಿಯಲ್ಲಿ ಭಾಗವಿದೆ, ಲಾಭ ನಷ್ಟಗಳಿಗೆ ಜವಾಬ್ದಾರಿಯಿದೆ, ಸಂಸಾರದ ಜವಾಬ್ದಾರಿಯಿರುತ್ತದೆ, ಅಂದ ಮೇಲೆ ವರಮಾನ ತೆರಿಗೆಯಿಂದ ಅವರಿಗೆ ಸ್ವಲ್ಪ ವಿನಾಯಿತಿ ಸಿಕ್ಕಿದರೆ ಅದು ನ್ಯಾಯ ಸಮ್ಮತವಲ್ಲವೆಂದು ಭಾವಿಸುವುದು ಸರಿಯಲ್ಲ. ಆದುದರಿಂದ......

Mr. DEPUTY SPEAKER.—Now that the time limit for this Bill has expired and that it is the intention of the House, as there are still many speakers, that time should be extended, there should be a motion for the same.

Sri S. R. KANTHI.—Sir, I make a motion :

"That the time for the consideration of the Agriculture Income-tax (Amendment) Bill, 1962 be extended by one hour.

Mr. DEPUTY SPEAKER.—I will put it to the House. The question is :

"That the time for the consideration of the Agricultural Income-tax (Amendment) Bill, 1962, be extended by one hour."

The motion was adopted.

(Sri V. Masiyappa stood up to continue his speech).

Sri GANGADHAR NAMOSHI (Gulbarga).–Iraise a point of order. There is no Minister on the Treasury Benches....

Mr. DEPUTY SPEAKER.—The Hon'ble Deputy Minister for Finance is there.

ಶ್ರೀ ವಿ. ಮಸಿಯಪ್ಪ.—ಹಿಂದೂ ಕೋಡ್ ಪ್ರಕಾರ ಅವಿಭಕ್ತ ಕುಟುಂಬದಲ್ಲಿ ಆಸ್ತಿಯ ಹಕ್ಕು, ಜವಾಬ್ದಾರಿ ಯಾರು ಯಾರಿಗೆ ಇದೆಯೋ ಅವರೆಲ್ಲರೂ ಒಟ್ಟು ಕುಟುಂಬಕ್ಕೆ ಸೇರಿದವರೆಂದು ಪರಿಗಣಿಸಲು ಅವಕಾಶವಿದೆಯೆಂದು ನಾನು ಹೇಳುತ್ತಿದ್ದೆ. ಇಂಡಿಯನ್ ಇನ್‌ಕಂ ಟ್ಯಾಕ್ಸ್ ಆಕ್ಟ್‌ನಲ್ಲೂ ಕೂಡ ಅವಕಾಶವಿದೆ. ಬೇರೆ ರಾಜ್ಯಗಳ ಕಾನೂನಿನಲ್ಲೇನು ಅವಕಾಶವಿದೆಯೆಂಬುದು ನನಗೆ ಗೊತ್ತಿಲ್ಲ. ಹಾಗಿರುವಾಗ ಈ ತಿದ್ದುಪಡಿ ಕಾನೂನಿನಲ್ಲಿ ಸೂಚಿಸಿರುವುದು ಸೂಕ್ತವಲ್ಲ. ಅದರಿಂದ ರೈತರಿಗೆ ಬಹಳ ಪೆಟ್ಟಾಗುತ್ತದೆ. ಇದನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತಂದು ಇನ್ನೂ ಸ್ವಲ್ಪ ಪರಿಶೀಲನೆ ಮಾಡುವ ಅಗತ್ಯವಿದೆಯೆಂದು ಸೂಚಿಸುತ್ತೇನೆ.

ಹಾಗೆಯೇ ಅನುಸೂಚಿ ಭಾಗದಲ್ಲಿರುವುದನ್ನು ಜಾರಿಗೆ ಕೊಡುವಾಗ ರೈತರಿಗೆ ತೊಂದರೆಯಾಗುವ ಸಂಭವವಿದೆಯೆಂದು ಕಾಣುತ್ತದೆ. ಆದುದರಿಂದ ಈ ಕಾನೂನು ಜಾರಿಗೆ ಬರುವುದಕ್ಕೆ ಮುಂಚೆ ರೈತರಿಗೆ ಹೆಚ್ಚು ತೊಂದರೆಯಾಗದ ಹಾಗೆ ತಿದ್ದುಪಡಿ ಮಾಡುವ ಅಗತ್ಯವಿದೆಯೆಂದು ಭಾವಿಸಿದ್ದೇನೆ. 50 ಎಕರೆಗಳೊಳಗಿರುವ ಸಂದರ್ಭದಲ್ಲಿ ವಿನಾಯಿತಿ ಸಿಕ್ಕುವುದಾದರೂ ರೈತರಿಗೆ ಕಷ್ಟವಾಗುವ ಪರಿಸ್ಥಿತಿಯಿದೆ. ಎಕರೇಜ್ ಬೇಸಿಸ್ ಇಟ್ಟಿರುವ ಉದ್ದೇಶ ಕಾಂಪೌಂಡಿಂಗ್ ಮಾಡುವುದಕ್ಕೆ ಅನುಕೂಲ, ಲೆಕ್ಕಪತ್ರ ಇಡುವುದನ್ನು ತಪ್ಪಿಸುವುದಕ್ಕೆ ಎಂದು ಹೇಳಿದರೂ ಸಹ ಅನೇಕ ಸಂದರ್ಭಗಳಲ್ಲಿ ಇದರಿಂದ ಅನುಕೂಲವಾಗುವಂತೆ ಕಾಣುವುದಿಲ್ಲ. ಆದುದರಿಂದ ಹೇಗೆ ಸರಿಪಡಿಸಬೇಕೆಂದು ಯೋಚನೆ ಮಾಡುವುದು ಅಗತ್ಯವಾಗಿದೆ. ಏನೂ ತಿಳಿಯದ ಹಳ್ಳಿಗಾಡಿನಲ್ಲಿರುವ ಅನೇಕ ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಆವಶ್ಯಕ. ಆದುದರಿಂದ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಪರಿಶೀಲಿಸುವುದು ಅಗತ್ಯವೆಂದು ನಾನು ವಿನಯದಿಂದ ಸೂಚಿಸುತ್ತೇನೆ.

‡**Sri M. Y. GHORPADE** (Sandur).—Sir, I want to make a few remarks on the subject. It can hardly be described as a speech. After listening to the Hon'ble Members on both sides of the House, I wish to join in emphasising two or three points.

The main point in connection with this Bill and in connection with various other Bills that happen to come before this House this time is that Hon'ble Members, both lawyers and laymen alike, find it extremely difficult to grasp the objects of the Bill from the two cryptic sentences contained in the Statement of Objects and Reasons. It has been proved beyond doubt by members, some of whom are experienced lawyears, that the cryptic manner in which the objects of the Bill are printed does not enable even experienced lawyers to understand the purpose of the Bill immediately. In view of the inevitable shortage of time, members do not have enough time to refer to Court judgments, to refer to the quantitative implications of the Bill and so forth. It is not, therefore, fair to ask the House to adopt it at so short a time, especially when sufficient facts are not made available in the Statement of Objects and Reasons. Therefore, I say that in future the Statement of Objects and Reasons must at least mention a gist of the Court judgment, what was the point made by the Court, etc. It should also mention the Legal Department's answer to get over the point These things must be specifically mentioned in the Statement of Objects and Reasons.

Secondly, after all, legislation is not intended for the legal section of the population only. It is something which affects the lives of the people. If Members of the House are asked to judge whether legislation is necessary or not, they should be enabled to know the practical implications of

(SRI M. Y. GHORPADE)

that legislation in terms of money, in terms of administrative difficulties, etc. We do not know what is the quantity of money that will come to the Exchequer and from what type of agriculturists. What is the percentage of small agriculturists who are affected ? Or, is it a fact that 80 to 90 per cent of the money comes from Plantations ? These are very pertinent facts which we must know before we can say whether this legislation is necessary or not. For instance, in the Sales-tax Act, it was only when the Hon'ble Chief Minister told us that it involved the question of a crore and a half of rupees already collected by the merchants—whether legally or illegally is a matter for argument—and that if certain amendments to the Act are not made the moneys already collected by the merchants would remain with them, we came to know that it involved such a huge amount. The merchants had collected it—legally or illegally—and this amount should go to the Government. That clarification of the Hon'ble Chief Minister made it very easy for us to see at least the equity of that legislation, quite apart from the legality of it. With regard to this legislation, there seems to be a lot of apprehension whether the Government have exposed all the facts and what are the practical implications of the law. Rightly, many agriculturists would like to know how it affects them. Therefore this one point justifies a little more time to be taken by Government and before passing they should refer it to a Select Committee.

I would once again make the point that even if a little more paper is required to be used for printing the Statement of Objects and Reasons in an elaborate manner, it is worthwhile. After all, this is paper civilization and Government is using such a lot of paper. The people are likely to have different opinions as to the justification for the volumes and volumes of paper used by Government in modern civilization. Therefore, henceforward if in three or four more papers the Statement of Objects and Reasons can be better explained, I think no paper could have been better used than that. I want to stress this point because there is unanimous agreement on the difficulties experienced by Members on account of the insufficient data given in the Statement of Objects and Reasons.

So far as the legality of the Bill is concerned, I want a clarification on two points. One is whether we in the new State are entitled to make law applicable to any areas included in the Bill which were not with Mysore then. I would like to know whether purely from the point of view of law it is possible for the State to legislate for an area for a period during which that area was not part of our State and outside the scope of the legislative powers of the State.

The second point is with regard to the amendment about joint family. I for one confess my inability to understand the amendment of joint family. I am sure the reason for this amendment must be very simple and the Law Department must be knowing it. It has created a lot of confusion and I for one cannot understand why the point is not made clear in the Statement of Objects and Reasons.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಂತ್ರಿಗಳು ಯಾರೂ ಈ ಸಭೆಯಲ್ಲಿ ಇಲ್ಲದೆ ಇರುವಾಗ ಈ ಮಸೂದೆಯ ಮೇಲೆ ಚರ್ಚೆ ನಡೆಯುತ್ತಾ ಇರಬಹುದೇ ?

Mr. DEPUTY SPEAKER.—There is the Deputy Minister for Finance here.

Sri M. Y. GHORPADE.—The amendment says that for the purpose of exemption under this Act joint family is re-defined as having five members of eighteen years of age. Suppose there are fifteen members in a joint family who are below eighteen years of age ; then they do not get this exemption, but if there are 5 members above eighteen, they get the exemption. It is very difficult for us to understand the logic of

this amendment because one would think that if members become 18 years old they would be entitled to partition, but particularly at that juncture exemption is sought to be given. I am sure there must be some reason for this exemption. Therefore, I must once again impress upon the Government the great necessity for making the Statement of Objects and Reasons more explicit both in terms of law and in terms of fact. We do not know how many people are going to be affected and to what extent; what are the implications of this Bill to the Exchequer and so on. Since this is a Bill which affects agriculturists, I feel it needs to be referred to a Select Committee because if the financial implications of this are not very much and if the State is not going to get very much from this, we will have to weigh it against the psychological reaction that it affects the agri-rulturists. Since 90 per cent of our people depend on agriculture, this assumes great importance. In view of these factors, this matter requires more careful consideration and I am sure that the Government in deference to the views expressed by both sides of the House will agree to give this matter further thought and not pass it in a hurry.

‡ ಶ್ರೀ ಎಂ. ಶ್ರೀನಿವಾಸ ನಾಯಕ್ (ಮಂಗಳೂರು-1).—ಮಾನ್ಯ ಸಭಾಪತಿಗಳೇ, ಈಗ ಈ ಸಭೆಯ ಮುಂದೆ ಇಟ್ಟಿರುವ ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಮಸೂದೆಯ ವಿಷಯವಾಗಿ ನನ್ನ ಅನೇಕ ಮಾನ್ಯ ಮಿತ್ರರುಗಳು ತಮ್ಮ ಅಭಿಪ್ರಾಯವನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಮಸೂದೆ ಬಡರೈತನ ಜೀವನ ಸಮಸ್ಯೆಗೆ ಸಂಬಂಧಪಟ್ಟದ್ದು. ಈ ಸಭೆಗೆ ಆರಿಸಿ ಬಂದಿರತಕ್ಕ ಮಾನ್ಯ ಸದಸ್ಯರೆಲ್ಲರೂ ರೈತರ ಪರವಾಗಿ ಆರಿಸಿ ಬಂದಿದ್ದಾರೆ. ಒಬ್ಬ ಬಡರೈತನ ವಿಷಯ ಈ ಮಸೂದೆಯಲ್ಲಿ ಹೀಗಿರುವಾಗ ಅವನ ಜೀವನಸಮಸ್ಯೆಗೆ ಸಂಬಂಧಪಟ್ಟ, ಅವನ ಆರ್ಥಿಕ ಸಮಸ್ಯೆಗೆ ಸಂಬಂಧಪಟ್ಟ ಈ ಮಸೂದೆಯನ್ನು ನಾವು ಇಲ್ಲಿ ಪರಾಂಬರಿಸದೆ ಸುಮ್ಮನೆ ಇದನ್ನು ಪಾಸು ಮಾಡುವುದು ಸರಿಯಲ್ಲ ಎಂದು ನನಗನ್ನಿಸುತ್ತದೆ. ರೈತರಿಂದ ಐದು ವರ್ಷಗಳ ಹಿಂದಿನಿಂದ ತೆರಿಗೆಯನ್ನು ವಸೂಲು ಮಾಡುವ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಬಹಳ ರೀತಿಯಿಂದ ಚರ್ಚೆ ಮಾಡಿದ್ದಾರೆ. ಆ ವಿಷಯ ಕೂಡ ಗಮನಾರ್ಹವಾದ ವಿಷಯವಾಗಿದೆ ಎಂದು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದು ಅಗತ್ಯವಾಗಿದೆ. ಈ ಮಸೂದೆಯಲ್ಲಿರತಕ್ಕ ಸಮಸ್ಯೆಗಳನ್ನು ಯಾವ ರೀತಿಯಿಂದಲೂ ಪರಿಶೀಲನೆ ಮಾಡದೆ ಈ ಮಸೂದೆಯನ್ನು ಅಂಗೀಕಾರ ಮಾಡಿದ್ದೇ ಆದರೆ ಅದರಿಂದ ಬಡರೈತನ ಜೀವನಕ್ಕೆ ಧಕ್ಕೆ ಬರುತ್ತದೆ. ಬಡರೈತನ ಜೀವನಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರದವರು ಆದಷ್ಟು ಗಮನ ಕೊಡಬೇಕು. ಈಗ ಇರತಕ್ಕ ಮಸೂದೆಯಿಂದ ಅವನ ಜೀವನಕ್ಕೆ ಖಂಡಿತವಾಗಿಯೂ ಧಕ್ಕೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಹೀಗಿರುವಾಗ ಈ ಸಮಸ್ಯೆಯನ್ನು ತೀವ್ರತೆಯಿಂದ ಪರಿಶೀಲಿಸಲು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕು. ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಈ ಮಸೂದೆಯಲ್ಲಿರತಕ್ಕ ಎಲ್ಲಾ ವಿಷಯಗಳನ್ನೂ ಅರಿವು ಮಾಡಿಕೊಂಡು ಈ ಮಸೂದೆಯನ್ನು ಯೋಗ್ಯರೀತಿಯಿಂದ ಸೂಕ್ತ ರೀತಿಯಿಂದ ಸರಿಪಡಿಸಿದ ಮೇಲೆ ಅಲ್ಲಿಂದ ವರದಿಯನ್ನು ತರಿಸಿಕೊಂಡು ನಂತರ ಈ ಮಸೂದೆಯನ್ನು ಈ ಸಭೆಯ ಮುಂದೆ ತಂದು ಅಂಗೀಕರಿಸಬೇಕೆಂದು ನಾನು ಆಶಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಸಿಟಿ ನಾರ್ತ್).—ಮಾನ್ಯ ಅಧ್ಯಕ್ಷರೇ, ಮೈಸೂರು ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲಿನ ಮೇಲೆ ಮಾತನಾಡುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಿಜವಾಗಿಯೂ ಹಿಂದೂ ಮುಂದೂ ಆಲೋಚನೆಯನ್ನು ಮಾಡದೆ ಈ ಮಸೂದೆಯನ್ನು ಈ ಸಭೆಯ ಮುಂದೆ ತಂದಿದ್ದಾರೆಂದು ಅರ್ಥವಾಗುತ್ತದೆ. ಬಹುಶಃ ಇನ್ನು ಯಾವ ಮಸೂದೆಯನ್ನೂ ಕೂಡ ತರುವುದಕ್ಕೆ ಅವಕಾಶವಿಲ್ಲದೆ, ಆಲೋಚನೆ ಮಾಡದೆ ಆತುರ ಆತುರವಾಗಿ ಇದನ್ನು ತಂದ ಹಾಗೆ ಕಾಣುತ್ತದೆ. ಈ ಮಸೂದೆಯ ಪ್ರಕಾರ 1955–56ನೇ ಇಸವಿಯಿಂದ ಕೂಡ ಲೆಕ್ಕವನ್ನು ಒಪ್ಪಿಸಬೇಕಾಗುತ್ತದೆ. ಇಂಥಾ ಒಂದು ಬಿಲ್ಲನ್ನು ನಾವು ಅಂಗೀಕರಿಸಿದ್ದೇ ಆದರೆ ಇದರಿಂದ ಜನಗಳಿಗೆ ತೊಂದರೆಯಾಗುತ್ತದೆ. ಮತ್ತು ಜನಗಳು ಲಾಯರನ್ನು ಇಟ್ಟುಕೊಂಡು ಈ ಅಮೆಂಡ್‌ಮೆಂಟನ್ನು ಆಲೋಚನೆ ಮಾಡಬೇಕಾಗುತ್ತದೆ. ಈಗ ಅಸೆಸ್‌ಮೆಂಟ್ ಮಾಡತಕ್ಕಂಥ ಅಧಿಕಾರಿಗಳು ಊಹೆಯ ಮೇಲೆ ಮಾಡಬೇಕಾಗುತ್ತದೆ. ಇಂಥಾ ಒಂದು ಮಸೂದೆಯನ್ನು ನಾವು ಪಾಸ್ ಮಾಡುವುದಾದರೆ ಹಿಂದಿನ 5–6 ವರ್ಷಗಳಿಂದ ಯಾವ ಊಹೆಯ ಮೇಲೆ ಅಧಿಕಾರಿಗಳು ತೆರಿಗೆಯನ್ನು ಹಾಕುತ್ತಾರೆ? ಯಾವ ರೀತಿ ತೆರಿಗೆಯನ್ನು ಕಲೆಕ್ಟ್ ಮಾಡುತ್ತಾರೆ? ಎರಡು ಸಾವಿರ ರೂಪಾಯಿಗಳ ವರಮಾನವಿದ್ದರೆ ಅದನ್ನು ಎರಡೂವರೆ ಸಾವಿರ, ಮೂರು ಸಾವಿರ, ಮೂರು ಸಾವಿರದ ಐದುನೂರು ಎಂದು ಏರಿಸುತ್ತಾರೆಂಬುದು ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಈ ರೀತಿ ಅಧಿಕಾರಿಗಳು ಒಂದಲ್ಲ ಒಂದು ರೀತಿಯಲ್ಲಿ ವರಮಾನವನ್ನು ಹೆಚ್ಚು ಕಡಮೆ ಮಾಡಿ ತೆರಿಗೆಯನ್ನು ಹಾಕುತ್ತಾರೆ. ಆದ್ದರಿಂದ ಈ ಅಮೆಂಡ್‌ಮೆಂಟ್ ಬಿಲ್ಲನ್ನು ನಾವು ಒಪ್ಪಿಕೊಳ್ಳುವುದಾದರೆ ರೈತರು ಯಾವ ರೀತಿ ತೆರಿಗೆಯನ್ನು ಕೊಡುತ್ತಾರೆ ಎಂಬುದನ್ನೂ ಕೂಡ ಯೋಚನೆ ಮಾಡಬೇಕಾಗುತ್ತದೆ. ಇಷ್ಟೇ ಅಲ್ಲದೆ ನಾವು ಬಹಳ ದೂರದೃಷ್ಟಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ನಮ್ಮ ದೇಶದಲ್ಲಿ ರೈತರ ಸಂಖ್ಯೆ ಜಾಸ್ತಿ ಇವೆಯೆಂದು ಅದರ ಆಧಾರದ ಮೇಲೆ ಇದನ್ನು ಮಾಡುತ್ತಿದ್ದಾರೆಂಬುದು ನಮಗೆ ಗೊತ್ತಾಗುತ್ತಿದೆ. ನಮ್ಮ ದೇಶದಲ್ಲಿ ಆಹಾರದ ಕೊರತೆ ಇದೆ ಎಂಬುದನ್ನು ನಮ್ಮ ಸರ್ಕಾರದವರು ಮರೆಯಬಾರದು. ಈ ಮಸೂದೆಯನ್ನು ಜಾರಿಗೆ ತಂದಿದ್ದೇ ಆದರೆ ಜನಗಳಿಗೆ ಉತ್ಸಾಹ ನಿರುತ್ಸಾಹವಾಗುತ್ತದೆ, ಎಂಬುದನು ಕೂಡ ಸರ್ಕಾರ

(ಶ್ರೀ ಬಿ. ಕೆ. ಪುಟ್ಟಯ್ಯ.)

ದವರು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಅದರ ಜೊತೆಗೆ ಕಾಂಗ್ರೆಸ್‌ನವರು ದೇಶದಲ್ಲಿ ಯಾವ ಒಂದು ತತ್ವವನ್ನು ಸಾರುತ್ತಿದ್ದಾರೆಯೋ ಆ ತತ್ವಕ್ಕೆ ಇದು ವಿರೋಧವಾಗಿದೆ ಎಂದು ನಾನು ಹೇಳ ಬೇಕಾಗುತ್ತದೆ. ಸೋಷಯಲಿಸ್ಟ್ ತತ್ವವನ್ನು ಕಾಂಗ್ರೆಸ್ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಆದರೆ ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡುವ ಕಾಲದಲ್ಲಿ ಅದನ್ನು ಮರೆತಂತೆ ಕಾಣುತ್ತದೆ. ಈಗ ಸರ್ಕಾರದವರು ಹಾಕತಕ್ಕ ತೆರಿಗೆಯಿಂದ ಕಡುಬಡವನ ಮೇಲೆ ಹೊರೆ ಯನ್ನು ಹಾಕುತ್ತಿದ್ದಾರೆಂದು ನಾವು ಅರ್ಥಮಾಡಿ ಕೊಳ್ಳಬೇಕಾಗುತ್ತದೆ. ಇಲ್ಲಿ ಐದು ಜನಗಳು ಇರುವ ಒಂದು ಕುಟುಂಬಕ್ಕೆ ವಿನಾಯಿತಿಯನ್ನು ಕೊಟ್ಟಿ ದ್ದಾರೆ. ಬೇರೆ ಕಡೆ 18 ವರ್ಷಗಳಿಗಿಂತ ಮೇಲ್ಪಟ್ಟ ವರು ಇಬ್ಬರು ಮೂವರು ಒಂದು ಸಂಸಾರದಲ್ಲಿ ಇದ್ದರೂ ಅದನ್ನು ಅವಿಭಕ್ತ ಕುಟುಂಬ ಎಂದು ಗಣನೆಗೆ ತೆಗೆದುಕೊಂಡು 7 ಸಾವಿರ ರೂಪಾಯಿಗಳ ರಿಬೇಟನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಮೈಸೂರು ಸರ್ಕಾರ ಇನ್ನೂ ಮುಂದೆ ಓಡಿ ಅದನ್ನೂ ಕೂಡ ಅವಿಭಕ್ತ ಕುಟುಂಬವೆಂದು ಒಪ್ಪಿಕೊಳ್ಳುವುದಿಲ್ಲ ಎಂದು ಇದರಿಂದ ಅರ್ಥವಾಗುತ್ತದೆ. ತಿದ್ದುಪಡಿ ಮಸೂದೆಯನ್ನು ಒಪ್ಪಿಕೊಳ್ಳುವಾಗ ನಾವು ಏನು ತತ್ವವನ್ನು ಹೇಳುತ್ತಿದ್ದೇವೆಯೋ ಅದಕ್ಕೆ ಅನುಸಾರ ವಾಗಿ ನಡೆಯಬೇಕು. ಜೊತೆಗೆ 1947 ನೆಯ ಇಸವಿ ಯಿಂದಲೂ ಯಾವ ಯಾವ ತೆರಿಗೆಗಳನ್ನು ಜನತೆಯ ಮೇಲೆ ಹೊರಿಸುತ್ತಿದ್ದೇವೆನ್ನುವುದನ್ನು ಆಲೋಚನೆ ಮಾಡಬೇಕು.

ಸ್ವಾಮಿ, ಈ ಸರ್ಕಾರದಲ್ಲಿ ಬಹಳ ಜನಗಳಿಗೆ ನಂಬಿಕೆ ಹೋಗಿದೆ. ಒಂದಲ್ಲ ಒಂದು ರೀತಿಯಲ್ಲಿ ಬಾಯಲ್ಲಿ ಏನು ಹೇಳುತ್ತಿದ್ದಾರೆಯೋ ಅದರಂತೆ ನಡೆ ಯದೆ ಅದಕ್ಕೆ ವಿರೋಧವಾಗಿ ನಡೆಯುತ್ತಿರುವುದೇ ಇದಕ್ಕೆ ಕಾರಣವೆಂಬುದು ಅರ್ಥವಾಗುತ್ತದೆ. ಸರ್ಕಾರ ಈ ತಿದ್ದುಪಡಿ ಮಸೂದೆಯನ್ನು ತಂದಿರು ವುದನ್ನು ನೋಡಿದರೆ ಇದು ಧನಿಕರಿಗೆ ಅನ್ವಯಿಸು ತ್ತದೆಯೋ ಅಥವಾ ಬಡವರಿಗೆ ಅನ್ವಯಿಸುತ್ತದೆಯೇ ಎಂಬುದು ತಿಳಿಯುತ್ತದೆ. ಇದನ್ನು ಆಲೋಚನೆ ಮಾಡಬೇಕು. ತತ್ವಕ್ಕೆ ವಿರುದ್ಧವಾಗಿ ತಂದಿರುವಂಥ ಈ ತಿದ್ದುಪಡಿ ಮಸೂದೆ ಒಪ್ಪಿಕೊಳ್ಳತಕ್ಕದ್ದಲ್ಲ.

ಕೋರ್ಟಿನವರು ಕೊಟ್ಟ ತೀರ್ಮಾನಗಳಿಗೆ ಬದ್ಧ ರಾಗಿ ನಡೆಯುವುದಕ್ಕೆ ಸರ್ಕಾರ ಪ್ರಯತ್ನಿಸಬೇಕು. ಈಗ ಏನು ಮಾಡುತ್ತಿದ್ದಾರೆಂದರೆ ಕೋರ್ಟಿನ ತೀರ್ಮಾನದಂತೆ ನಡೆಯದೆ, ಕಾನೂನುಗಳನ್ನು ತಿದ್ದುಪಡಿಮಾಡಿ ಜನತೆಯ ಮೇಲೆ ಅಸ್ತ್ರಗಳನ್ನು ಪ್ರಯೋಗಿಸುವುದಕ್ಕೆ ಹೊರಟಿದ್ದಾರೆ. ನ್ಯಾಯಾಲಯವು ಒಂದು ತೀರ್ಮಾನವನ್ನು ಕೊಟ್ಟರೆ, ಅದಕ್ಕೆ ತಲೆಬಾಗಿ, ಅದನ್ನು ಒಪ್ಪಿಕೊಳ್ಳುವುದನ್ನು ನಾವೆಲ್ಲರೂ ಕಲಿಯ ಬೇಕು. ಇದರಿಂದ ಸರ್ಕಾರಕ್ಕೆ ಮತ್ತು ಜನಗಳಿಗೆ ಒಳ್ಳೆಯದಾಗುತ್ತದೆ. ಕೋರ್ಟಿನ ತೀರ್ಮಾನಕ್ಕೆ ವಿರುದ್ಧವಾಗಿ ಹೋಗಲು ಪ್ರಯತ್ನಿಸುವುದರಿಂದ ಜನ ಗಳಿಗೆ ತೊಂದರೆ ಕೊಡುತ್ತೀರೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಎಲ್ಲ ವಿಷಯಗಳನ್ನೂ ಆಲೋಚನೆಮಾಡಿ ನಮ್ಮ ಮುಂದಿರುವ ಈ ತಿದ್ದುಪಡಿ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳಿಸಬೇಕೆಂದು ಹೇಳುತ್ತೇನೆ.

‡ ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರ ಪುರ).—ಮಾನ್ಯ ಅಧ್ಯಕ್ಷರೇ, ತೆರಿಗೆಗಳನ್ನು ಹಾಕತಕ್ಕ ಮಸೂದಾ ಕಾನೂನುಗಳು ಬಂದರೆ ವಿರೋಧವಿರ ತಕ್ಕದ್ದು ಸಾಮಾನ್ಯ ವಿಷಯ. ಆದರೆ ಈ ಒಂದು ಮಸೂದಾ ಕಾನೂನು ಬಂದಾಗ ಕಾಂಗ್ರೆಸ್ ಪಕ್ಷ ಅಥವಾ ಎದುರು ಪಕ್ಷವಲ್ಲ, ಎಲ್ಲ ಪಕ್ಷಗಳೂ ಒಂದೇ ಧ್ವನಿಯಿಂದ ಇದನ್ನು ವಿರೋಧಿಸುತ್ತಿರುವುದು ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಹಿಂದೆ ವ್ಯವ ಸಾಯಗಾರನ ಮೇಲೆ ವರಮಾನ ತೆರಿಗೆ ಹಾಕ ಬೇಕೆಂದು ಮಸೂದೆಯನ್ನು ತಂದಾಗ, ಈ ಸಭೆಯಲ್ಲಿ ಚರ್ಚೆ ನಡೆದು, ರೈತನ ಮೇಲೆ ತೆರಿಗೆಯನ್ನು ಹಾಕುವ ಸಂದರ್ಭದಲ್ಲಿ, ರೈತನು ಅಕ್ಷರಸ್ಥನಲ್ಲ, ಅವನು ನಾನಾ ವಿಧವಾದ ತೊಂದರೆಗಳಿಗೆ ಗುರಿ ಯಾಗುತ್ತಾನೆ, ಅದನ್ನು ಹೇಗಾದರೂ ಮಾಡಿ ತಪ್ಪಿಸಬೇಕೆನ್ನುವ ವಿಷಯವನ್ನು ಸ್ಪಷ್ಟವಾಗಿ ನಮ್ಮ ಮಾನ್ಯ ಸಭೆಯ ಸದಸ್ಯರು ತಿಳಿಸಿದರು. ಆದರೆ ಆಗ ಯಾವ ಒಂದು ಸದುದ್ದೇಶವಿತ್ತೋ ಅದನ್ನು ಹೋಗಲಾಡಿಸಿ, ಈ ದಿವಸ ಹೇಗಾದರೂ ಮಾಡಿ ಅವನನ್ನು ತೆರಿಗೆ ಹಾಕತಕ್ಕ ಅಧಿಕಾರಿಗಳ ಕೈಗೆ ಸಿಕ್ಕಿಸಬೇಕು ಎನ್ನುವ ಉದ್ದೇಶವಿರುವುದು ಇದರಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಇದಕ್ಕೆ ಅವಕಾಶ ಕೊಡ ಬಾರದು. ಮಾನ್ಯ ಸದಸ್ಯರು ಎಲ್ಲ ಅಂಕಿಅಂಶ ಗಳನ್ನೂ ತಿಳಿಸಿದ್ದಾರೆ. ಹೊಸದಾಗಿ ಹೇಳಬೇಕಾ ದ್ದೇನೂ ಇಲ್ಲವೆಂದು ನಾನು ಭಾವಿಸುತ್ತೇನೆ. ಆದು ದರಿಂದ ಈ ಕಾನೂನನ್ನು ವಾಪಸು ತೆಗೆದುಕೊಳ್ಳ ಬೇಕೆಂದು ಹೇಳುತ್ತೇನೆ. ಒಂದು ಪಕ್ಷ ಹಾಗೆ ವಾಪಸು ತೆಗೆದುಕೊಳ್ಳುವುದು ಸಾಧ್ಯವಿಲ್ಲವೆನ್ನುವು ದಾದರೆ ಇದನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿ ಇದರಲ್ಲಿ ರುವ ಲೋಪದೋಷಗಳನ್ನು ನಿವಾರಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗೋಪಾಲ ಸಾಲೆನ್ನ (ಮೂಡಬಿದ್ರೆ).—ಸನ್ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯ ವಿಚಾರದಲ್ಲಿ ಇಲ್ಲಿ ಎಲ್ಲ ಪಕ್ಷದವರೂ ಕೂಡ ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸಿ ಈ ಮಸೂದೆಯ ಹೆಚ್ಚಿನ ಮಟ್ಟಿಗೆ ಅನಗತ್ಯ ಮತ್ತು ಅದಷ್ಟು ಮಟ್ಟಿಗೂ ಅದನ್ನೂ ವಾಪಸು ತೆಗೆದುಕೊಳ್ಳುವುದು ಉತ್ತಮ ವೆಂಬ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ ಹಾಗೆ ಕಾಣುತ್ತದೆ. ಇದು ನಿಜವಾಗಿಯೂ ಅತ್ಯಾವಶ್ಯ ಕವಾದ ವಿಚಾರ. ನಮ್ಮ ದೇಶದಲ್ಲಿ, ಮುಖ್ಯವಾಗಿ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಕಾನೂನುಗಳ ಪಟ್ಟಿ ಜಾಸ್ತಿಯಾಗಿ ಜನರಿಗೆ ಆ ಕಾನೂನುಗಳ ತತ್ವವನ್ನನು ಸರಿಸಲಿಕ್ಕೆ ಬಹಳ ಕಷ್ಟವಾಗಿದೆ ಮಾತ್ರವಲ್ಲ ಅವು ಗಳನ್ನು ತಿಳಿದುಕೊಳ್ಳಲಿಕ್ಕೆ ಕಷ್ಟವಾಗಿದೆ, ಅವು ಗಳನ್ನು ಜಾರಿ ಮಾಡತಕ್ಕ ಸರ್ಕಾರದ ಯಂತ್ರಕ್ಕೂ ಕೂಡ ಅಸಾಧ್ಯವಾಗಿದೆ ಇಂಥ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಅನಾಯಕತೆ ಹೆಚ್ಚಿ ಜನರ ಜೀವನ ಭಯಾನ ಕವಾಗಿ ಪರಿಣಮಿಸಿದೆ ಎನ್ನುವುದು ಎಲ್ಲರಿಗೂ ತಿಳಿದಿದೆ. ಮೊದಲನ ಕಾಲದಲ್ಲಿ ಪೋಲೀಸ್ ಅಧಿಕಾ ರಿಗಳು, ಯಾರು ಕಾನೂನನ್ನು ಉಲ್ಲಂಘನೆ ಮಾಡು ತ್ತಾರೆಯೋ, ಅಂಥವರು ಕಳ್ಳರನ್ನು, ದರೋಡೆಕಾರರು ಇಂಥವರನ್ನು ಹಿಡಿಯುವಂಥ ಪರಿಸ್ಥಿತಿ ಇತ್ತು. ಈಗ ಯೋಗ್ಯರಾದವರು, ಸತ್ಯವಾಗಿದ್ದವರು ಸಾಮಾನ್ಯ ಸರ್ಕಾರಿ ಜವಾನನು ಆ ದಾರಿಯಲ್ಲಿ ಹೋಗುತ್ತಿದರೂ ಕೂಡ, ಹೆದರಿ ನಡೆಯುವಂಥ ಪರಿಸ್ಥಿತಿ ಜಾರಿಯಲ್ಲಿ ರುತ್ತದೆ. ಆದುದರಿಂದ ಈ ತಿದ್ದುಪಡಿಗಳಲ್ಲಿ ಸೂಚಿ ಸಿರುವ ಹಲವು ವಿಷಯಗಳಲ್ಲಿ ಇರುವಂಥ ನ್ಯೂನತೆ ಗಳನ್ನು ಮಾನ್ಯ ಸದಸ್ಯರು ತೋರಿಸಿಕೊಟ್ಟಿದ್ದಾರೆ. ಈ ಮಸೂದೆಯ ಐದನೆಯ ಕ್ಲಾಜಿನಲ್ಲಿರುವ ಹದಿನೆಂಟು

ವರ್ಷಗಳ ಪ್ರಾಯದ ಮಿತಿ ಅಗತ್ಯವಿಲ್ಲ, ಅದರಿಂದ ಬಾಧಕವುಂಟು ಎಂದು ಹೇಳುತ್ತೇನೆ.

ಇನ್ನೂ ಹಲವು ವಿಚಾರಗಳಲ್ಲಿ ಮಾನ್ಯ ಸದಸ್ಯರು ನ್ಯೂನತೆಗಳನ್ನು ಸ್ಪಷ್ಟಪಡಿಸಿ ತಿಳಿಸಿದ್ದಾರೆ. ಆದುದರಿಂದ ಈ ತಿದ್ದುಪಡಿ ಕಾಯಿದೆಯನ್ನು ವಾಪಸು ತೆಗೆದುಕೊಳ್ಳುವುದು ಅತ್ಯಾವಶ್ಯಕವೆಂಬ ಸಲಹೆಯನ್ನು ನಾನೂ ಕೂಡ ಪುಷ್ಟೀಕರಿಸುತ್ತೇನೆ. ಅಷ್ಟು ಮಾತ್ರವಲ್ಲ, ಇಲ್ಲಿ ಮಾತನಾಡಿದಂಥ ಅಧಿಕಾರದಲ್ಲಿರುವ ಪಕ್ಷದ ಸದಸ್ಯರೂ ನಮ್ಮಂತೆಯೇ ಅದೇ ಅಭಿಪ್ರಾಯವನ್ನು ಅವರ ನಾಯಕರ ಮುಂದೆ ಇಟ್ಟು ಇದನ್ನು ವಾಪಸು ತೆಗೆದುಕೊಳ್ಳುವಂತೆ ಒತ್ತಾಯಪಡಿಸಿದರೆ ಒಳ್ಳೆಯ ಪರಿಣಾಮವಾಗುತ್ತದೆ.

Sri S. SIVAPPA.—Sir, I rise to a point of order. There is nobody in the Treasury Bench except a Deputy Minister. The Deputy Minister is not a Member of the Cabinet. There is no Minister of Cabinet rank, here.

‡ **ಶ್ರೀ ಸಿ. ಜೆ. ಮುಕ್ಕಣ್ಣಪ್ಪ.**—ಲೋಕಸಭೆಯಲ್ಲಿ ಸ್ಪೀಕರ್ ಅವರು ಒಂದು ವಿಷಯವನ್ನು ತಿಳಿಸಿದ್ದಾರೆ. ಯಾವುದಾದರೂ ಒಂದು ಮಸೂದೆಯನ್ನು pilot ಮಾಡುವಾಗ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇರಲೇಬೇಕು ಎಂದು ಹೇಳಿದ್ದಾರೆ. ನಾನು ವಾದಕ್ಕೋಸ್ಕರ ಈ ವಿಷಯವನ್ನು ಹೇಳುತ್ತಿಲ್ಲ. ಒಂಬತ್ತು ಜನ ಮಂತ್ರಿಗಳೂ ಇಬ್ಬರು ತುಂಡುಮಂತ್ರಿಗಳೂ ಇದ್ದಾರೆ.

(ನಗು)

ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಹಾಜರಿರಬೇಕು ಎನ್ನುವುದನ್ನು ಸ್ವಲ್ಪ ಕಟ್ಟುನಿಟ್ಟಾಗಿ ಅಧ್ಯಕ್ಷರು ಪಾಲನೆ ಮಾಡಬೇಕು. ಈ ರೀತಿ ಒಬ್ಬ ಉಪಮಂತ್ರಿಗಳನ್ನು ಬಿಟ್ಟು ಉಳಿದವರು ಯಾರೂ ಸಭೆಯಲ್ಲಿಲ್ಲದೇ ಇರುವುದು ಸರ್ಕಾರಕ್ಕೆ ಭೂಷಣವಲ್ಲ. ಕ್ರಿಯಾಲೋಪ ಮುಂತಾದುವು ಬರುವುದಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಸಂಬಂಧಪಟ್ಟ ಮಂತ್ರಿಗಳಾದರೂ ಸಭೆಯಲ್ಲಿರಬೇಕು. ಈ ದೃಷ್ಟಿಯಿಂದ cabinet rankಗೆ ಸೇರಿದ ಒಬ್ಬ ಮಂತ್ರಿಗಳು ಮುಂದುಗಡೆ ಬೆಂಚಿನಲ್ಲಿ ಕುಳಿತಿರುವುದು ಸೂಕ್ತವೆಂದು ಹೇಳುತ್ತೇನೆ.

Mr. DEPUTY SPEAKER.—The Hon'ble Member Sri Muckannappa is an old Member. He knows very well that 'Minister' includes Deputy Minister; and when a Deputy Minister is present it cannot be said that there is no Minister in the House.

Sri C. J. MUCKANNAPPA.—Sir, I never said that it was a point of order. I never expected a ruling from you, Sir.

Mr. DEPUTY SPEAKER.—I am referring to Sri Sivappa. There is no point of order in what Sri Sivappa said.

The House will now rise and meet again at 1 P.M. tomorrow.

The House adjourned at Six of the Clock to meet again at One of the Clock on Friday, the 11th May 1962.

WD 7279—GPB—900—1-12-1962.